ಉಪನ್ಯಾಸ ಗ್ರಂಥಮಾಲೆ

೯೨

ಬ್ಯಾಂಕುಗಳ ರಾಷ್ಟ್ರೀಕರಣ

ಎಸ್. ಜಿ. ಕರಭಂಟನಾಳ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜನವರಿ, ೧೯೭೦

ಉಪನ್ಯಾಸ ಗ್ರಂಥಮಾಲೆ

೧. ಭವಭೂತಿ (ದ್ವಿತೀಯ ಆವೃತ್ತಿ) –ಕೆ. ಕೃಷ್ಣಮೂರ್ತಿ
೨. ಮನೋರೋಗಗಳು (ತೃ.ಆ.) –ಎನ್. ಆರ್. ಕುಲಕರ್ಣಿ
೩. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ –ಎನ್. ಪಿ. ಪಾಟೀಲ
೪. ಗಾದೆಗಳು (ದ್ವಿ. ಆ.) –ಎ. ಕೆ. ರಾಮಾನುಜನ್
೫. ಭಾರತದಲ್ಲಿ ಜಾತಿ ಪದ್ಧತಿ (ದ್ವಿ.ಆ.)–ವ್ಹಿ. ಎಸ್. ಡಿ'ಸೋಜಾ
೬. ಕೀಟಕ ಪಿಡುಗುಗಳ ಸಮೀಕ್ಷಣೆ (ದ್ವಿ.ಆ.) –ಎಸ್. ಎಸ್. ಕಟಗಿಹಳ್ಳಿಮಠ
೭. ರಾಜಕೀಯ ಪಕ್ಷಗಳು(ದ್ವಿ.ಆ.)-ಎನ್.ರಾಜಗೋಪಾಲರಾವ್
೮. ಸ್ವಾದಿ ಅರಸುಮನೆತನ (,,)-ಎಸ್. ಎಸ್. ಮಾಳವಾಡ
೯. ಮಕ್ಕಳ ಶಿಕ್ಷಣ (ತೃ.ಆ.) –ಡಿ. ಎಸ್. ಕರ್ಕಿ
೧೦. ಮೂಢ ನಂಬಿಕೆಗಳು (,,) –ಎಲ್. ಆರ್. ಹೆಗಡೆ
೧೧. ಸಂಸ್ಕೃತ ಕವಯಿತ್ರಿಯರು (ದ್ವಿ. ಆ.)–ಕೆ. ಟಿ. ಪಾಂಡುರಂಗಿ
೧೨. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ (,,) –ಬಿ. ವಿರೂಪಾಕ್ಷಪ್ಪ
೧೩. ಸಾರ್ವಜನಿಕ ಆಡಳಿತ (ದ್ವಿ. ಆ.) –ಜಿ. ಎಸ್. ಹಾಲಪ್ಪ
೧೪. ವಿಚಾರವಾದ (,,) –ಗೌರೀಶ ಕೈಕಿಣಿ
೧೫. ಮಹಾಕವಿ ಮಿಲ್ಟನ್ (,,) –ಜಿ. ಎಸ್. ಆಮೂರ
೧೬. ಭಾರತದಲ್ಲಿ ಗ್ರಂಥಾಲಯ ಪ್ರಸಾರ(,,)–ಕೆ. ಎಸ್. ದೇಶಪಾಂಡೆ
೧೭. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ (ದ್ವಿ. ಆ.) –ಬಿ. ಎಚ್. ಶ್ರೀಧರ
೧೮. ಜನಸಂಖ್ಯೆ ಹಾಗು ಆಹಾರ ಸಮಸ್ಯೆ –ಪಿ. ಎಂ. ಉಮಾಕಾಂತಶಾಸ್ತ್ರಿ
೧೯. ಸೌರವ್ಯೂಹ (ದ್ವಿ.ಆ.) –ಸಿ. ಎನ್. ಶ್ರೀನಿವಾಸ ಅಯ್ಯಂಗಾರ
೨೦. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ (ದ್ವಿ. ಆ.) –ಸಿ. ವ್ಹಿ. ರಂಗಸ್ವಾಮಿ
೨೧. ಸಮಾಜ ಕಾರ್ಯ(ದ್ವಿ.ಆ.)–ಎಚ್. ಎಂ. ಮರುಳಸಿದ್ಧಯ್ಯ
೨೨. ಸಂಸತ್ತಿನ ಕಾರ್ಯಪದ್ಧತಿ (,,)–ಎ. ಎಂ. ರಾಜಶೇಖರಯ್ಯ
೨೩. ಕನ್ನಡನಾಡಿನ ಶಾಸನಗಳು (ದ್ವಿ. ಆ.) –ಪಿ. ಬಿ. ದೇಸಾಯಿ
೨೪. ಕವೀಂದ್ರ ರವೀಂದ್ರರು (,,) –ಎಸ್. ಎಸ್. ಮಾಳವಾಡ
೨೫. ನಾಗಾನಂದ (,,) –ಎಚ್.ಪಿ. ಮಲ್ಲೇದೇವರು
೨೬. ಜೀವನದಲ್ಲಿ ನಗೆ (,,) –ಎಂ. ಎಸ್. ಸುಂಕಾಪುರ
೨೭. ಬಸವಣ್ಣನವರ ಯೋಜನೆಗಳು (,,) –ಬಿ. ಸಿ. ಜವಳಿ
೨೮. ೧೮೫೭ರ ಕ್ರಾಂತಿ (,,) –ಸಿ. ವೀರಬಸಪ್ಪ
೨೯. ಕನ್ನಡ ಕಥಾಸೃಷ್ಟಿ (ದ್ವಿ. ಆ.) –ಬಿ. ಬಿ. ಮಹೀಶವಾಡಿ
೩೦. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ (ದ್ವಿ. ಆ.) –ಕೆ. ಕೃಷ್ಣಮೂರ್ತಿ
೩೧. ನೀರಾವರಿ ಬೇಸಾಯ –ಎಸ್. ಎ. ಹೊಸಮನಿ

ಉಪನ್ಯಾಸ ಗ್ರಂಥಮಾಲೆ

೯೨

ಬ್ಯಾಂಕುಗಳ ರಾಷ್ಟ್ರೀಕರಣ

ಎಸ್. ಜಿ. ಕರಭಂಟನಾಳ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜನವರಿ, ೧೯೭೦

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.

ರಜಿಸ್ಟ್ರಾರ್,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಜನವರಿ, ೧೯೭೦ (೫೦೦೦ ಪ್ರತಿಗಳು)

ಬೆಲೆ : ೨೫ ಪೈಸೆ

ಮುದ್ರಕರು :

ಸಂಗಮ ಮುದ್ರಣಾಲಯ,

ಸಾಧನಕೇರಿ, ಧಾರವಾಡ

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ತೊಂಬತ್ತೊಂದು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟವೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಎ. ಎಸ್. ಅಡಕೆ
ಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ–೩
೧೪–೧–೧೯೭೦

ಪ್ರಸ್ತಾವನೆ

ಕರ್ನಾಟಕ ವಿಶ್ವವಿದ್ಯಾಲಯದ ೧೯೭೯ನೆಯ ಪ್ರಾಸಂಗ ವಿಸ್ತರಣ ಉಪನ್ಯಾಸ ಶಿಬಿರವನ್ನು ಚಿಕ್ಕೋಡಿಯಲ್ಲಿ ಏರ್ಪಡಿಸ ಲಾಗಿತ್ತು. ಅದರಲ್ಲಿ ನನಗೆ ' ಬ್ಯಾಂಕುಗಳ ರಾಷ್ಟ್ರೀಕರಣ ' ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನೀಯುವ ಅವ ಕಾಶವನ್ನೀಯಲಾಗಿತ್ತು. ಅದರ ವಿವರ ಇಂದು ಕಿರುಹೊತ್ತಿ ಗೆಯ ರೂಪದಲ್ಲಿ ಪ್ರಕಟವಾಗುತ್ತಿರುವುದು ಆನಂದದ ವಿಷಯ.

ಇಂದು ಭಾರತದಲ್ಲಿ ಅಭಿವೃದ್ಧಿ ಕಾರ್ಯಗಳು ಪಂಚವಾ ರ್ಷಿಕ ಯೋಜನೆಗಳ ಕಾರ್ಯಕ್ರಮಗಳ ಪಟ್ಟಿಗನುಗುಣವಾಗಿ ಆಚರಣೆಯಲ್ಲಿವೆ.ಅವು ಯಶಸ್ವಿಯಾಗಿ ಪೂರ್ತಿಗೊಳ್ಳಬೇಕಾದರೆ ಆಯಾ ಕ್ಷೇತ್ರಗಳಿಗೆ ಸಮಯಕ್ಕನುಸಾರವಾಗಿ ತಕ್ಕಮಟ್ಟಿಗೆ ಹಣದ ಪೂರೈಕೆಯಾಗಬೇಕು. ಬ್ಯಾಂಕುಗಳು ಕೃಷಿ, ವ್ಯಾಪಾರ, ಸಣ್ಣ ಮತ್ತು ದೊಡ್ಡ ಪ್ರಮಾಣದ ಉದ್ದಿಮೆಗಳು, ನಿರ್ಯಾತ ವ್ಯಾಪಾರ ಮೊದಲಾದವುಗಳಿಗೆ ಸಾಲವನ್ನೊದಗಿಸುತ್ತ ಬಂದಿವೆ. ಆದರೆ ಈ ಪತ್ತಿನ ಪ್ರಮಾಣ ಅತಿ ಕಡಿಮೆಯಾದುದ ರಿಂದ ಪ್ರಗತಿ ಅಷ್ಟೊಂದು ತೀವ್ರಗತಿಯಿಂದ ಸಾಗುತ್ತಿಲ್ಲ. ರಾಷ್ಟ್ರದ ಸಂಪನ್ಮೂಲಗಳ ಮೇಲೆ ಅಧಿಕ ನಿಯಂತ್ರಣವನ್ನು ಸಾಧಿಸಲು ರಾಷ್ಟ್ರೀಕರಣವೊಂದು ಸಾಧನ ಮಾತ್ರ. ಇಂದು ನಮ್ಮ ದೇಶದಲ್ಲಿ ಎಷ್ಟೋ ಸಂಸ್ಥೆಗಳು ರಾಷ್ಟ್ರೀಕರಿಸಲ್ಪಟ್ಟಿವೆ.

ಜೀವವಿಮಾ ಸಂಸ್ಥೆ, ಇಂಪೀರಿಯಲ್ ಬ್ಯಾಂಕ ರಾಷ್ಟ್ರೀಕರಿಸಲ್ಪಟ್ಟವು. ವಾಣಿಜ್ಯ ಬ್ಯಾಂಕುಗಳು ಹೆಚ್ಚಾಗಿ ದೊಡ್ಡ ಉದ್ದಿಮೆಗಳಿಗೇ ಹಣವನ್ನೊದಗಿಸಿದ್ದುವಾದುದರಿಂದ ಮತ್ತು ದೇಶದ ಆರ್ಥಿಕ ಬಲ ಕೆಲ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾದದ್ದು ಕಂಡು ಬಂದುದರ ಪರಿಣಾಮವಾಗಿ ಸರಕಾರವು ಸಾಮಾಜಿಕ ನಿಯಂತ್ರಣ ಧೋರಣೆಯನ್ನು ಮುಂದುವರಿಸದೆ ದೇಶದ ಪ್ರಮುಖ ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವ ವಿಶೇಷಾಜ್ಞೆಯನ್ನು ಕಳೆದ ಜುಲೈ ೧೯ರಂದು ಜಾರಿಯಲ್ಲಿ ತಂದಿತು. ಇಂದು ರಾಷ್ಟ್ರೀಕರಣ ಘೋಷಣೆ ಕಾಯದೆರೂಪದಲ್ಲಿದೆ. ರಾಷ್ಟ್ರೀಕರಣದಿಂದ ವ್ಯವಸಾಯ, ಸಣ್ಣಕೈಗಾರಿಕೆಗಳು, ನಿರ್ಯಾತಗಳಿಗೆ ಅಧಿಕ ಪ್ರಮಾಣದಲ್ಲಿ, ಕಡಮೆ ಬಡ್ಡಿದರದಿಂದ ಸಾಲದ ಪೂರೈಕೆಯಾಗುವುದರಲ್ಲಿ ಸಂಶಯವಿಲ್ಲ.

ಠೇವುದಾರರು ಮತ್ತು ಸೇವಕ ವರ್ಗದವರಿಗೆ ಹೆಚ್ಚಿನ ಭದ್ರತೆ ದೊರೆಯುವದಲ್ಲದೆ, ರಾಷ್ಟ್ರದ ಸಂಪನ್ಮೂಲಗಳನ್ನು ಆರ್ಥಿಕ ವಿಷಮತೆಯನ್ನು ಹೋಗಲಾಡಿಸಲು ಯೋಗ್ಯರೀತಿಯಿಂದ ವಿನಿಯೋಗಿಸಲು ಅನುಕೂಲವಾಗುವುದು. ರಾಷ್ಟ್ರೀಕರಣದಿಂದ ಪರಿಹಾರ ಧನವೆಂದು ಕೆಲವೊಂದು ಮೊತ್ತವನ್ನು ಶೇಅರುದಾರರಿಗೆ ಕೊಡಬೇಕಾಗುವುದು. ಬ್ಯಾಂಕುಗಳ ಸ್ವಾಯತ್ತತೆ ಕಡಮೆಯಾಗಿ ಅವುಗಳ ಬೆಳವಣಿಗೆ ಕುಂಠಿತವಾಗಬಹುದು. ನಾಲ್ಕನೆಯ ಯೋಜನೆಯಲ್ಲಿ ಖಾಸಗಿ ವಿಭಾಗಕ್ಕೆ ದೊರೆಯಬೇಕಾದ ಸಾಲದ ಪ್ರಮಾಣ ಕಡಮೆಯಾಗಬಹುದು. ಸರಕಾರವು ಯೋಗ್ಯವಾದ ವಿನಿಯೋಗ ನೀತಿಯನ್ನು ರೂಪಿಸಿ

ದಲ್ಲಿ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ. ಸಮಾಜವಾದೀ ಸಮಾಜರಚನೆಯ ಕಾರ್ಯದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಆದರ್ಶನೀಯವಾದ ವಿಷಯವಾದರೂ ಅದರ ಗೊತ್ತು ಗುರಿಗಳನ್ನು ಕಾರ್ಯರೂಪದಲ್ಲಿ ತರಲು ನಮ್ಮಲ್ಲಿ ದಕ್ಷ ಮತ್ತು ಪ್ರಾಮಾಣಿಕ ಆಡಳಿತಗಾರರ ಅವಶ್ಯಕತೆ ಇದೆ. ಈ ಕೆಲ ವಿಚಾರಗಳನ್ನು ಇಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ. ಸಾಮಾನ್ಯ ಓದುಗರಿಗೆ ಈ ಪ್ರಕಟನೆಯು ಪ್ರಯೋಜನಕಾರಿಯಾದೀತೆಂದು ಆಶಿಸುತ್ತೇನೆ. ಶಿಬಿರದಲ್ಲಿ ಭಾಗವಹಿಸಲು ಆಸ್ಪದ ನೀಡಿದ್ದಕ್ಕಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳಿಗೂ, ವಿಸ್ತರಣ ಶಾಖೆಯ ಡಾಯರೆಕ್ಟರ ಶ್ರೀಮಾನ್ ಚೆನ್ನವೀರ ಕಣವಿ ಅವರಿಗೂ ನಾನು ತುಂಬಾ ಉಪಕೃತ.

ನಿಪ್ಪಾಣಿ
೨೮-೧೦-೧೯೬೯

ಎಸ್. ಜಿ. ಕರಭಂಟನಾಳ

ವಿಷಯಸೂಚಿಕೆ

ಬ್ಯಾಂಕುಗಳ ರಾಷ್ಟ್ರೀಕರಣ

೧ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬ್ಯಾಂಕುಗಳ ಪಾತ್ರ

ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಿ ಪೂರ್ತಿಗೊಳ್ಳಬೇಕಾದರೆ ಆಯಾ ಕ್ಷೇತ್ರಗಳಿಗೆ ಸಮಯಕ್ಕನುಸಾರವಾಗಿ ಹಣದ ಪೂರೈಕೆಯಾಗಬೇಕು. ಬ್ಯಾಂಕುಗಳು ಸಾರ್ವಜನಿಕರ ಉಳಿತಾಯವನ್ನು ಶೇಖರಿಸಿ ಕೃಷಿ, ವ್ಯಾಪಾರ, ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳಿಗೆ ಸಾಲವನ್ನೊದಗಿಸಿ ಆರ್ಥಿಕ ಅಭಿವೃದ್ಧಿಗೆ ಸಹಾಯಕಾರಿಯಾಗಿವೆ. ಹಣದ ಪೂರೈಕೆಯಲ್ಲಿ ವಿಲಂಬವಾದಲ್ಲಿ ವಿಶಿಷ್ಟ ಗುರಿಗಳನ್ನು ಮುಟ್ಟುವುದು ಕಷ್ಟಸಾಧ್ಯವಾದ ಮಾತು. ಇಂದು ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳ ಕಾರ್ಯಕ್ರಮಗಳ ಪಟ್ಟಿಗನುಗುಣವಾಗಿ ಅಭಿವೃದ್ಧಿ ಕಾರ್ಯಗಳು ಆಚರಣೆಯಲ್ಲಿವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಗಾತ್ರ ಮೊದಲಿನ ಮೂರು ಯೋಜನೆಗಳ ಗಾತ್ರಕ್ಕಿಂತಲೂ ಅಧಿಕವಾಗಿದೆ. ಸುಮಾರು ೨೪,೯೯೮ ಕೋಟಿ ರೂಪಾಯಿಗಳ ವಿನಿಯೋಗದ ಅಂದಾಜು ಮಾಡಲಾಗಿದೆ. ಸಾರ್ವಜನಿಕ ವಿಭಾಗದಲ್ಲಿ ೧೪,೯೯೮ ಕೋಟಿ ಮತ್ತು ಖಾಸಗಿ ವಿಭಾಗದಲ್ಲಿ ೧೦,೦೦೦ ಕೋಟಿ ರೂಪಾಯಿಗಳು ಈ

ಅವಧಿಯಲ್ಲಿ ವಿನಿಯೋಗಿಸಲ್ಪಡುವವು. ಕೃಷಿ, ಕೈಗಾರಿಕೆ, ಸಾರಿಗೆ ಸಂಪರ್ಕ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಅವುಗಳ ಪ್ರಾಧಾನ್ಯತೆಗನುಗುಣವಾಗಿ ಹಣ ವಿನಿಯೋಗ ಮಾಡಲಾಗುವದು. ಕೃಷಿಕ್ಷೇತ್ರದಲ್ಲಿಯು ಗೊತ್ತುಗುರಿಗಳನ್ನು ಮುಟ್ಟಲು ೨,೨೧೭ ಕೋಟಿ ರೂಪಾಯಿಗಳನ್ನು ಮತ್ತು ಗ್ರಾಮೀಣ ಕೈಗಾರಿಕೆಗಳ ಹಾಗೂ ಸಣ್ಣ ಉದ್ದಿಮೆಗಳ ಬೆಳವಣಿಗೆಗಾಗಿ ೨೯೪.೭ ಕೋಟಿ ರೂಪಾಯಿಗಳನ್ನು ವಿನಿಯೋಗಿಸಬೇಕಾಗುವುದು. ಕೃಷಿಪ್ರಧಾನವಾದ ನಮ್ಮ ದೇಶದಲ್ಲಿ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿ ಕೃಷಿ ಅಭಿವೃದ್ಧಿಯನ್ನವಲಂಬಿಸಿದೆ. ಜನತೆಯ ನಿತ್ಯ ಆಹಾರ ಬೇಡಿಕೆಗಳನ್ನು ಪೂರೈಸಿ ಉದ್ದಿಮೆಗಳ ಬೆಳವಣಿಗೆಗೆ ಸಹಾಯಕಾರಿಯಾಗುವಂತೆ ಉತ್ಪಾದನೆಯಲ್ಲಿ ಆಧಿಕ್ಯ (Surplus) ನಿರ್ಮಾಣವಾಗಬೇಕು. ಅದರಂತೆ ನಿರುದ್ಯೋಗ ಸಮಸ್ಯೆಯ ನಿವಾರಣೆಗಾಗಿ ಗ್ರಾಮೀಣ ಕೈಗಾರಿಕೆಗಳಿಗೆ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಉತ್ತೇಜನ ದೊರೆಯುವಂತಾಗಬೇಕು. ಈ ಕ್ಷೇತ್ರಗಳಿಗೆ ಪ್ರಾಧಾನ್ಯತೆ ಕೊಡುತ್ತಿರುವಾಗ ಬೃಹತ್ ಕೈಗಾರಿಕೆಗಳನ್ನು ಕಡೆಗಣಿಸುವಂತಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ವಿಭಾಗಗಳಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳ ಸಂಯೋಜನೆಯನ್ನು ಸಾಧಿಸಲು ಆಯಾ ಕ್ಷೇತ್ರಗಳಿಗೆ ಹಣದ ಪೂರೈಕೆ ಸರಿಯಾಗಿ ಸಾಗಬೇಕು. ಆದುದರಿಂದ ಸರಕಾರವು ರಾಷ್ಟ್ರದ ಸಂಪನ್ಮೂಲಗಳ ಮೇಲೆ ಅಧಿಕ ನಿಯಂತ್ರಣ ವಹಿಸಬೇಕಾಗುವುದು. ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸರಕಾರವು ಮಹತ್ವವಾದ ಪಾತ್ರ

ವನ್ನು ವಹಿಸಬೇಕಾಗುವುದು. ಯೋಜನೆಯ ಗೊತ್ತುಗುರಿಗಳನ್ನು ಸಾಧಿಸಲು ಸಮನ್ವಯ ಆರ್ಥಿಕ ಧೋರಣೆಯನ್ನು ರೂಪಿಸಬೇಕಾಗುವುದು. ಮತ್ತು ಆ ಆರ್ಥಿಕ ಧೋರಣೆಯನ್ವಯ ಆಡಳಿತ ಯಂತ್ರವನ್ನು ಕೂಡ ಸುವ್ಯವಸ್ಥಿತಗೊಳಿಸಬೇಕಾಗುವುದು.

ಸಮಾಜವಾದೀ ಸಮಾಜ ರಚನೆಯು ಇಂದು ನಮ್ಮ ಗುರಿಯಾಗಿದೆ. ನಮ್ಮ ರಾಷ್ಟ್ರದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೊಸ ಸಮಾಜವನ್ನು ರಚಿಸಬೇಕಾಗಿದೆ. ನವೀನ ಸಾಮಾಜಿಕ ಪ್ರಗತಿಪರ ಮೌಲ್ಯಗಳ ಸಾಧನೆಗಾಗಿ ಆರ್ಥಿಕ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ಪುನಾರಚಿಸುವ ಕಾರ್ಯದಲ್ಲಿ ನಾವು ನಿರತರಾಗಿದ್ದೇವೆ. ಇದೊಂದು ಮಹಾಯಜ್ಞವೆಂದೇ ಹೇಳಬೇಕು. ಆರ್ಥಿಕ ಬೆಳವಣಿಗೆಯಲ್ಲಿ ತೀವ್ರಗತಿಯ ಪ್ರಗತಿ ಜನಸಾಮಾನ್ಯರ ನಿತ್ಯ ಜೀವನಮಟ್ಟವನ್ನು ಸುಧಾರಿಸಲು ಕಾರಣೀಭೂತವಾದುದು. ಕಾಂಗ್ರೆಸ್ ಸಂಸ್ಥೆಯು ಈ ಆದರ್ಶವನ್ನು ತ್ವರಿತಗತಿಯಲ್ಲಿ ಸಾಧಿಸಲು ಹತ್ತು ಅಂಶಗಳ ಒಂದು ಧೋರಣೆಯನ್ನು ರೂಪಿಸಿದೆ. ಖಾಸಗೀ ಕ್ಷೇತ್ರದಲ್ಲಿಯ ಹದಿನಾಲ್ಕು ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣವು ಈ ದಿಶೆಯಲ್ಲಿ ಮಹತ್ವದ ದಿಟ್ಟ ಹೆಜ್ಜೆಯೆನ್ನಬಹುದು.

ರಾಷ್ಟ್ರದ ಉಳಿತಾಯದ ಬಹು ಭಾಗವು ಬ್ಯಾಂಕುಗಳಿಗೆ ಸೇರಿದ್ದುದರಿಂದ ಬ್ಯಾಂಕುಗಳು ರಾಷ್ಟ್ರದ ಆರ್ಥಿಕ ಧೋರಣೆಯನ್ನು ಕಾರ್ಯಗತಗೊಳಿಸುವಲ್ಲಿ ಪರಿಣಾಮಕಾರಿ ಸಂಸ್ಥೆಗಳಾಗಿವೆ. ಬ್ಯಾಂಕುಗಳು ಈ ಉಳಿತಾಯವನ್ನು ಕೃಷಿ, ಕೈಗಾರಿಕೆ,

ವ್ಯಾಪಾರ ಮೊದಲಾದ ಕ್ಷೇತ್ರಗಳಿಗೆ ವಿವಿಧ ಪ್ರಮಾಣದಲ್ಲಿ ಪೂರೈಸುತ್ತಿವೆ. ವಾಣಿಜ್ಯ ಬ್ಯಾಂಕುಗಳು ಜನರ ಉಳಿತಾಯವನ್ನು ಅನೇಕ ಪ್ರಕಾರದ ಠೇವುಗಳಲ್ಲಿ ಸ್ವೀಕರಿಸುವವು. ಠೇವುಗಳನ್ನು ಹೆಚ್ಚಿಸುವಲ್ಲಿ ಬ್ಯಾಂಕುಗಳು ತಮ್ಮ ತಮ್ಮಲ್ಲಿ ಸ್ಪರ್ಧೆಗಿಳಿಯುವವು. ಜನರು ಈ ಹಣವನ್ನು ಬೇಕಾದಾಗ ತೆಗೆದುಕೊಳ್ಳಬಹುದು. ಸಾಮಾನ್ಯವಾಗಿ ವಾಣಿಜ್ಯ ಬ್ಯಾಂಕುಗಳು ಅಲ್ಪ ಕಾಲೀನ ಪತ್ತನ್ನು ಮಾತ್ರ ಪೂರೈಸುತ್ತಿವೆ. ಕೈಗಾರಿಕೆಗಳಿಗೆ ದೀರ್ಘಕಾಲೀನ ಪತ್ತನ್ನೂ ಪೂರೈಸಲು ಪ್ರತ್ಯೇಕ ಸಂಸ್ಥೆಗಳಿವೆ. ಔದ್ಯಮಿಕ ಹಣಕಾಸಿನ ಸಂಸ್ಥೆ (Industrial Finance Corpoiation) ಔದ್ಯಮಿಕ ಪತ್ತು ಮತ್ತು ವಿನಿಯೋಗ ಸಂಸ್ಥೆ (Industrial Cerdit and Investment Corporatian) ಮತ್ತು ಔದ್ಯಮಿಕ ಅಭಿವೃದ್ಧಿ ಬ್ಯಾಂಕ (Industrial Development Bank) ಮೊದಲಾದವುಗಳು ಬೃಹತ್ ಪ್ರಮಾಣದ ಕೈಗಾರಿಕೆಗಳಿಗೆ ೨೦-೨೫ ವರ್ಷಗಳ ಅವಧಿಯ ಪತ್ತನ್ನು ಪೂರೈಸುತ್ತಿವೆ. ಕೃಷಿಯ ಬೆಳವಣಿಗೆಗಾಗಿ ಸಹಕಾರಿ ಬ್ಯಾಂಕುಗಳು ಅಲ್ಪಕಾಲೀನ ಪತ್ತನ್ನು ಪೂರೈಸುತ್ತಿವೆ. ದೀರ್ಘಾವಧಿಯ ಪತ್ತು ಕೃಷಿ ಮರುಹಣಕಾಸು ಸಂಸ್ಥೆ (Agricultural Refinance Corporation) ಯಿಂದ ದೊರೆಯುತ್ತದೆ. ವಾಣಿಜ್ಯ ಬ್ಯಾಂಕುಗಳು ಮಾತ್ರ ಕೃಷಿ ಕ್ಷೇತ್ರವನ್ನು ಕಡೆಗಣಿಸಿವೆ ಎಂದು ಹೇಳಬಹುದು. ಜುಲೈ ೧೯೬೯ರಲ್ಲಿ ರಾಷ್ಟ್ರೀಕರಿಸಲ್ಪಟ್ಟ ಹದಿನಾಲ್ಕು ಬ್ಯಾಂಕುಗಳು ತಮ್ಮ ಒಟ್ಟು ಸಾಲದ ಶೇಕಡಾ ೨ರಷ್ಟನ್ನು ಮಾತ್ರ ಚಹ, ರಬ್ಬರ,

ಕಾಫಿ ಒಳಗೊಂಡು ಕೃಷಿ ಉತ್ಪಾದನೆಗೆ ಪೂರೈಸಿದವು. ಒಕ್ಕಲಿಗರು ಕೃಷಿ ಬೆಳವಣಿಗೆಗಾಗಿ ಅವಶ್ಯವಿರುವ ಪತ್ತಿನ ಪೂರೈಕೆಗಾಗಿ ಇನ್ನೂ ಸಾಹುಕಾರರು ಸಣ್ಣ ವ್ಯಾಪಾರಿಗಳು ಮತ್ತು ಸಂಬಂಧಿಕರನ್ನೇ ಅವಲಂಬಿಸಬೇಕಾಗಿದೆ. ಸಣ್ಣ ಉದ್ದಿಮೆಗಳ ಪರಿಸ್ಥಿತಿಯೂ ಇದೇ ರೀತಿಯಾಗಿದೆ. ಶೇಕಡಾ ೬ ರಷ್ಟನ್ನು ಮಾತ್ರ ಈ ಕ್ಷೇತ್ರಕ್ಕೆ ವಾಣಿಜ್ಯ ಬ್ಯಾಂಕುಗಳು ಸಾಲ ಕೊಡುತ್ತಿದ್ದವು. ವಾಣಿಜ್ಯ ಬ್ಯಾಂಕುಗಳು ಸಾಮಾನ್ಯವಾಗಿ ಜನತೆಯ ಉಳಿತಾಯದ ಹಣದಿಂದ ತಮ್ಮ ವ್ಯವಹಾರವನ್ನು ಸಾಗಿಸಿ ಲಾಭದ ಅಂಶವನ್ನು ಹೆಚ್ಚಿಸುವಲ್ಲಿ ನಿರತವಾಗಿವೆ ಎಂಬ ಕಲ್ಪನೆ ಬರುವುದು. ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಕೃಷಿ ಮತ್ತು ಸಣ್ಣ ಕೈಗಾರಿಕೆಗಳು ಮಹತ್ವದ ಕ್ಷೇತ್ರಗಳಾಗಿವೆ. ರಾಷ್ಟ್ರದ ಉಳಿತಾಯ ರಾಷ್ಟ್ರದ ಹಿತಕ್ಕಾಗಿ ಮೀಸಲಾಗಿರಿಸಬೇಕು. ಉಳಿತಾಯದ ಬಹುಭಾಗ ಆಯಾ ಕ್ಷೇತ್ರಗಳ ಪ್ರಾಧಾನ್ಯತೆಗನುಗುಣವಾಗಿ ಉಪಯೋಗವಾದಲ್ಲಿ ಆರ್ಥಿಕ ಗುರಿಗಳನ್ನು ಮುಟ್ಟುವುದು ಸಾಧ್ಯವಾಗುವುದು. ಈ ದೃಷ್ಟಿಯಿಂದ ಸರಕಾರವು ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ಸಾಲದ ಧೋರಣೆಯನ್ನು ರೂಪಿಸಬೇಕಾಗುವುದು. ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣ ಮತ್ತು ಸ್ಟೇಟ ಬ್ಯಾಂಕ ಅಫ್ ಇಂಡಿಯಾದ ಸ್ಥಾಪನೆ, ಇತ್ತೀಚಿನ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣ ಮೊದಲಾದವುಗಳು ಈ ದಿಶೆಯಲ್ಲಿ ಮಹತ್ವದ ಸಾಧನೆಗಳಾಗಿವೆ.

೨ ಭಾರತದಲ್ಲಿ ಬ್ಯಾಂಕುಗಳ ಬೆಳವಣಿಗೆ

ಭಾರತದಲ್ಲಿ ಬ್ಯಾಂಕುಗಳ ಸ್ಥಾಪನೆಯಾಗುವ ಪೂರ್ವದಲ್ಲಿ ಸಾಹುಕಾರರ ಪ್ರಭಾವ ಹೆಚ್ಚಾಗಿದ್ದಿತು. ಶೇಠ, ಚೆಟ್ಟಿಯಾರ, ಮುಲ್ತಾನಿ ಮೊದಲಾದ ದೇಶೀ ಬ್ಯಾಂಕರರು ದೇಶದ ಅಂತರ್ ವ್ಯಾಪಾರಕ್ಕೆ ಬೇಕಾಗುವ ಹಣವನ್ನು ಪೂರೈಸುತ್ತಿದ್ದರು. ಈಸ್ಟ ಇಂಡಿಯಾ ಕಂಪನಿಯು ದಿನೇ ದಿನೇ ಹೆಚ್ಚುತ್ತಿರುವ ವ್ಯವಹಾರಕ್ಕೆ ಸಾಲದ ಪೂರೈಕೆ ದೊರೆಯಲಿಲ್ಲವಾದುದರಿಂದ ಮುಂಬಯಿ ಕಲಕತ್ತಾಗಳಲ್ಲಿ ಏಜನ್ಸಿ ಹೌಸುಗಳನ್ನು (Agency Houses) ಯುರೋಪಿಯನ್ನರು ಸ್ಥಾಪಿಸಿದರು. ವಿದೇಶೀ ಬ್ಯಾಂಕ ಪದ್ಧತಿಯ ಆಧಾರದ ಮೇಲೆ ರಚಿತವಾದ ಮೊದಲನೆಯ ಬ್ಯಾಂಕ ೧೬೮೩ ರಲ್ಲಿ ಮದ್ರಾಸದಲ್ಲಿ ಸ್ಥಾಪಿತವಾಯಿತು. ೧೭೨೪ ರಲ್ಲಿ ಸರಕಾರೀ ಬ್ಯಾಂಕು ಮುಂಬಯಿಯಲ್ಲಿ ಸ್ಥಾಪಿತವಾಯಿತು. ಈ ಬ್ಯಾಂಕಿಗೆ ನೋಟುಗಳನ್ನು ಮುದ್ರಿಸುವ ಅಧಿಕಾರವನ್ನು ಕೊಡಲಾಯಿತು. ಸರಕಾರದ ಪ್ರೋತ್ಸಾಹನದಿಂದ ೧೮೦೯ ರಲ್ಲಿ ಬ್ಯಾಂಕ ಆಫ್ ಕಲಕತ್ತಾ ರಚಿತವಾಯಿತು. ಅದೇ ಮುಂದೆ ಬ್ಯಾಂಕ ಆಫ್ ಬೆಂಗಾಲ್ ಎಂದು ಹೆಸರಾಯಿತು. ೧೮೪೦ ಮತ್ತು ೧೮೪೩ ರಲ್ಲಿ

ಬ್ಯಾಂಕ ಆಫ್ ಬಾಂಬೇ ಮತ್ತು ಬ್ಯಾಂಕ ಆಫ್ ಮದ್ರಾಸ್ ಈ ಎರಡು ಪ್ರಾಂತೀಯ ಬ್ಯಾಂಕುಗಳು ಸ್ಥಾಪಿತವಾದವು. ೧೮೬೨ ರಲ್ಲಿ ಈ ಬ್ಯಾಂಕುಗಳಿಂದ ನೋಟ ಚಲಾವಣೆ ಅಧಿಕಾರವನ್ನು ತೆಗೆದುಕೊಳ್ಳಲಾಯಿತು. ಹೀಗಾಗಿ ಅವು ಕೇವಲ ವಾಣಿಜ್ಯ ಬ್ಯಾಂಕುಗಳಾಗಿ ಉಳಿದವು. ೧೮೬೮ ರಲ್ಲಿ ಬ್ಯಾಂಕ ಆಫ್ ಬಾಂಬೇ ಭಯಂಕರ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು. ೧೯೨೧ ರಲ್ಲಿ ಈ ಮೂರು ಪ್ರಾಂತೀಯ ಬ್ಯಾಂಕುಗಳನ್ನು ಕೇಂದ್ರೀಕರಿಸಿ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಸ್ಥಾಪಿಸಲ್ಪಟ್ಟಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಅವಧಿಯಲ್ಲಿ ಮತ್ತು ೨೦ ನೆಯ ಶತಮಾನದ ಮೊದಲ ಭಾಗದಲ್ಲಿ ಅಮೇರಿಕನ್ ಸಿವಿಲ್ ಯುದ್ಧ ಮತ್ತು ಭಾರತದಲ್ಲಿ ಸ್ವದೇಶೀ ಚಳವಳಿಯ ಪರಿಣಾಮವಾಗಿ ಅಲಹಾಬಾದ ಬ್ಯಾಂಕ (೧೮೬೫) ಔಧ್ ವಾಣಿಜ್ಯ ಬ್ಯಾಂಕು (೧೮೮೧) ಪಂಜಾಬ ನ್ಯಾಶನಲ್ ಬ್ಯಾಂಕ (೧೮೯೪) ಬ್ಯಾಂಕ ಆಫ್ ಇಂಡಿಯಾ (೧೯೦೬) ಕ್ಯಾನರಾ ಬ್ಯಾಂಕ (೧೯೦೬) ಇಂಡಿಯನ್ ಬ್ಯಾಂಕ (೧೯೦೭) ಬ್ಯಾಂಕ ಆಫ್ ಬರೋಡಾ (೧೯೦೮)ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ (೧೯೧೧)ಮೊದಲಾದ ಖಾಸಗಿ ಬ್ಯಾಂಕುಗಳು ಸ್ಥಾಪಿಸಲ್ಪಟ್ಟವು. ಈ ಬ್ಯಾಂಕುಗಳು ಮೊದಲು ಎಷ್ಟೋ ಆತಂಕಗಳನ್ನೆದುರಿಸಬೇಕಾಯಿತು. ವಿದೇಶೀ ಪದ್ಧತಿಯ ಬ್ಯಾಂಕ ವ್ಯವಹಾರದ ಪೂರ್ಣ ಪರಿಚಯವಿಲ್ಲದಿದ್ದುದರಿಂದ ಎಷ್ಟೋ ಬ್ಯಾಂಕುಗಳು ತಮ್ಮ ವ್ಯವಹಾರವನ್ನು ನಿಲ್ಲಿಸಬೇಕಾಯಿತು. ಈ ರೀತಿಯ ಬ್ಯಾಂಕುಗಳು ಎದುರಿಸಬೇಕಾದ ಮುಗ್ಗಟ್ಟನ್ನು ನಿಯಂತ್ರಿಸಲು

ಮತ್ತು ಜನತೆಯ ವಿಶ್ವಾಸವನ್ನು ಸ್ಥಿರೀಕರಿಸಲು ಸರಕಾರದ ನಿಯಂತ್ರಣ ಅವಶ್ಯವೆನಿಸಿತು.

೧೯೨೧ರಲ್ಲಿ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾದ ಸ್ಥಾಪನೆಯು ಭಾರತೀಯ ಬ್ಯಾಂಕಿನ ಇತಿಹಾಸದಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಬ್ಯಾಂಕಿನ ಸ್ಥಾಪನೆಯಿಂದ ಮಧ್ಯವರ್ತಿ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕ ವ್ಯವಹಾರದ ಸಂಯೋಜನೆ ಸಾಧ್ಯವಾಯಿತು. ಸರಕಾರವು ತನ್ನ ವ್ಯವಹಾರವನ್ನೆಲ್ಲಾ ಇಂಪೀರಿಯಲ್ ಬ್ಯಾಂಕ ಮೂಲಕ ಮಾಡಹತ್ತಿತು. ಇಂಪೀರಿಯಲ್ ಬ್ಯಾಂಕು ಅನುಸರಿಸಿದ ಧೋರಣೆ ಉಳಿದ ವಾಣಿಜ್ಯ ಬ್ಯಾಂಕುಗಳಿಗೆ ದಾರಿದೀಪವಾಯಿತು. ೧೯೨೬ರಲ್ಲಿ ಹಿಲ್ಟನ್ ಯಂಗ್ ಕಮಿಶನ್ ಬ್ಯಾಂಕಿನ ಅಭಿವೃದ್ಧಿ ಕುರಿತು ಒಳ್ಳೆಯ ಅಭಿಪ್ರಾಯ ಕೊಟ್ಟಿತು. ಆದರೆ ಮಧ್ಯವರ್ತಿ ಬ್ಯಾಂಕಿನ ವ್ಯವಹಾರವು ವಾಣಿಜ್ಯ ಬ್ಯಾಂಕುಗಳ ವ್ಯವಹಾರಗಳಿಂದ ಭಿನ್ನವಾಗಿರುವುದರಿಂದ ಪ್ರತ್ಯೇಕವಾದ ಮಧ್ಯವರ್ತಿ ಬ್ಯಾಂಕು ಸ್ಥಾಪಿಸಲ್ಪಡಬೇಕೆಂದು ಸೂಚಿಸಿತು. ರಿಜರ್ವ ಬ್ಯಾಂಕಿನ ಆಡಳಿತದ ಬಗ್ಗೆ ಭಿನ್ನಾಭಿಪ್ರಾಯಗಳ ಮೂಲಕ ರಿಜರ್ವ ಬ್ಯಾಂಕ ಆಫ್ ಇಂಡಿಯಾ ೧೯೨೬ರಲ್ಲಿ ಸ್ಥಾಪಿತವಾಗಲಿಲ್ಲ.

ಮೊದಲನೆಯ ಜಾಗತಿಕ ಯುದ್ಧಾನಂತರದ ಅವಧಿಯಲ್ಲಿ ಅತಿ ಪ್ರಸರಣವು ಅನೇಕ ಬ್ಯಾಂಕುಗಳ ಸ್ಥಾಪನೆಗೆ ಕಾರಣವಾಗಿದ್ದರೂ ಎಷ್ಟೋ ಮಹತ್ವದ ಬ್ಯಾಂಕುಗಳು ಮುಚ್ಚಲ್ಪಟ್ಟವು. ಇವುಗಳಲ್ಲಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕು, ಅಲಾಯನ್ಸ ಬ್ಯಾಂಕ, ಸಿಮ್ಲಾ ತ್ರಾವಣಕೋರ ನ್ಯಾಶನಲ್ ಮತ್ತು ಕ್ವಿಲನ್

ಬ್ಯಾಂಕು ಮುಖ್ಯವಾಗಿವೆ. ವಾಣಿಜ್ಯ ಬ್ಯಾಂಕುಗಳ ವ್ಯವಹಾರವನ್ನು ನಿಯಂತ್ರಿಸಿ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವಂತೆ ಸಾಲದ ಧೋರಣೆಯನ್ನು ರೂಪಿಸುವುದು ಆವಶ್ಯಕವೆನಿಸಿತು. ೧೯೨೯-೩೦ರಲ್ಲಿ ರಾಷ್ಟ್ರವು ಆರ್ಥಿಕ ಮುಗ್ಗಟ್ಟನ್ನು ಸಹ ಎದುರಿಸಬೇಕಾಯಿತು. ಆರ್ಥಿಕ ಸ್ಥಿರತೆಯ ಆವಶ್ಯಕತೆ ಹೆಚ್ಚಾಗಿ ಕಂಡು ಬಂದಿತು. ೧೯೩೫ರಲ್ಲಿ ರಿಜರ್ವ ಬ್ಯಾಂಕ ಆಫ್ ಇಂಡಿಯಾ ದೇಶದ ಮಧ್ಯವರ್ತಿ ಬ್ಯಾಂಕ್ ಎಂದು ಸ್ಥಾಪಿತವಾಯಿತು. ಮುಂದೆ ೧೯೪೯ರಲ್ಲಿ ಇದು ರಾಷ್ಟ್ರೀಕರಣಗೊಳಿಸಲ್ಪಟ್ಟಿತು. ನೋಟುಗಳನ್ನು ಚಲಾಯಿಸುವ ಮತ್ತು ಪತ್ತನ್ನು ನಿಯಂತ್ರಿಸುವ ಅಧಿಕಾರವನ್ನೂ ಕೊಡಲಾಯಿತು. ವಾಣಿಜ್ಯ ಬ್ಯಾಂಕುಗಳ ವ್ಯವಹಾರ ಸರಿಯಾಗಿ ನಡೆಯುವಂತೆ ಅವುಗಳನ್ನು ನಿಯಂತ್ರಿಸುವ ಅಧಿಕಾರವನ್ನು ಸಹ ರಿಜರ್ವ ಬ್ಯಾಂಕ ಆಫ್ ಇಂಡಿಯಾಕ್ಕೆ ಕೊಡಲಾಯಿತು. ಕೃಷಿ, ಕೈಗಾರಿಕೆ, ವಾಣಿಜ್ಯ ಮೊದಲಾದ ಆರ್ಥಿಕ ಕ್ಷೇತ್ರಗಳಿಗೆ ಬೇಕಾಗುವ ಸಾಲದ ಪ್ರಮಾಣವನ್ನು ಗೊತ್ತುಪಡಿಸಿ ಆಯಾ ಕ್ಷೇತ್ರಗಳಿಗೆ ಸಾಲದ ಪೂರೈಕೆ ಸರಿಯಾಗಿ ದೊರೆಯುವಂತೆ ಮಾಡುವುದು ರಿಜರ್ವ ಬ್ಯಾಂಕಿನ ಹೊಣೆಯಾಗಿದೆ. ಸಾಲದ ಗಾತ್ರ ಮತ್ತು ವಿತರಣೆಯ ನಿಯಂತ್ರಣ ರಿಜರ್ವ ಬ್ಯಾಂಕಿಗೆ ಸೇರಿದ ವಿಷಯವಾಗಿದೆ. ದೇಶದ ವಿವಿಧ ಭಾಗಗಳಿಗೆ ಬ್ಯಾಂಕುಗಳ ಅನುಕೂಲತೆಯನ್ನು ಒದಗಿಸಲು ಶಾಖೆಗಳ ಸ್ಥಾಪನೆಗೆ ಇದು ಪ್ರೋತ್ಸಾಹವೀಯುತ್ತಿದೆ. ಒಟ್ಟಿನಲ್ಲಿ ರಿಜರ್ವ ಬ್ಯಾಂಕು ರಾಷ್ಟ್ರದ ಹಣಕಾಸಿನ ವ್ಯವಸ್ಥೆಯಲ್ಲಿ ಭದ್ರತೆಯನ್ನುಂಟು ಮಾಡಿ ಸರಕಾರದ

ಧೋರಣೆಯು ಯಶಸ್ವಿಯಾಗಿ ಕಾರ್ಯಗತವಾಗುವಂತೆ ಜವಾ
ಬ್ದಾರಿಯನ್ನು ಹೊರಬೇಕಾಗುವದು.

ಬ್ಯಾಂಕಿಂಗ ಕಂಪನಿಯ ಕಾಯ್ದೆಯು ಕಲಮುಗಳನ್ನು
ಅನ್ವಯಿಸಿದ್ದರ ಮೂಲಕ ವಾಣಿಜ್ಯ ಬ್ಯಾಂಕುಗಳ ಕೆಲ ಅವ್ಯವ
ಹಾರಗಳನ್ನು ತಡೆಯಲಾಯಿತು. ಅನಾವಶ್ಯಕ ಶಾಖೆಗಳ ಸ್ಥಾಪನೆ
ಯನ್ನು ತಡೆಯಲಾಯಿತು. ೧೯೬೦ರಲ್ಲಿ ಪಲಾಯಿ ಸೆಂಟ್ರಲ್
ಬ್ಯಾಂಕ ಮುಚ್ಚಿದಂದಿನಿಂದ ವಾಣಿಜ್ಯ ಬ್ಯಾಂಕುಗಳ ಮೇಲಿನ
ನಿಯಂತ್ರಣ ಮತ್ತಷ್ಟು ಬಿಗಿಯಾಯಿತು. ಕಡ್ಡಾಯವಾಗಿ ಕೆಲ
ಸಣ್ಣ ಬ್ಯಾಂಕುಗಳ ಕೇಂದ್ರೀಕರಣ ಅವಶ್ಯವೆನಿಸಿತು. ೧೯೬೦-
೬೭ರ ಅವಧಿಯಲ್ಲಿ ಸುಮಾರು ೨೦೦ ಬ್ಯಾಂಕುಗಳು ಕ್ರೋಢೀಕ
ರಿಸಲ್ಪಟ್ಟವು. ಇದರಿಂದ ಒಟ್ಟು ಭಾರತದ ಶೆಡ್ಯೂಲ್ಡ ಬ್ಯಾಂಕು
ಗಳ ಸಂಖ್ಯೆ ೭೪ರಿಂದ ೫೮ಕ್ಕೆ ಕಡಿಮೆಯಾಯಿತು. ಶೆಡ್ಯೂಲ್ಡ್
ಅಲ್ಲದ ಬ್ಯಾಂಕುಗಳ ಸಂಖ್ಯೆಯಾದರೂ ಸಹ ೨೫೬ರಿಂದ ೧೭ಕ್ಕೆ
ಇಳಿಯಿತು. ಈ ತೆರದ ಧೋರಣೆಯಿಂದ ಸರಕಾರವು ಬ್ಯಾಂಕು
ಗಳ ವ್ಯವಹಾರದ ಮೇಲೆ ಪರಿಣಾಮಕಾರಿಯಾದ ನಿಯಂತ್ರಣ
ವನ್ನು ಸ್ಥಾಪಿಸಲನುಕೂಲವಾಯಿತು.

೧೯೫೫ ರಲ್ಲಿ ಸ್ಥಾಪಿತವಾದ ಸ್ಟೇಟ ಬ್ಯಾಂಕ್ ಆಫ್
ಇಂಡಿಯಾ ಕೂಡ ರಿಜರ್ವ ಬ್ಯಾಂಕ ಆಫ್ ಇಂಡಿಯಾ ಕೈಕೊಂಡ
ಕ್ರಮಗಳಲ್ಲಿ ಒಂದಾಗಿದೆ. ೧೯೨೧ರಿಂದ ಇಂಪೀರಿಯಲ್ ಬ್ಯಾಂಕ
ವಿದೇಶೀ ಬ್ಯಾಂಕ ಆಗಿಯೇ ತನ್ನ ಕಾರ್ಯ ಆರಂಭ ಮಾಡಿತು.
ಅದು ರಾಷ್ಟ್ರೀಯ ಧೋರಣೆಗೆ ತದ್ವಿರುದ್ಧವಾಗಿ ಪರಿಣಮಿ
ಸಿತು. ಭಾರತೀಯರಿಗೆ ಬ್ಯಾಂಕಿನ ಆಡಳಿತದಲ್ಲಿ ಸರಿಯಾದ

ಸ್ಥಾನ ದೊರೆಯಲಿಲ್ಲ. ಸಾಲದ ಪೂರೈಕೆಯಲ್ಲಿಯೂ ಕೂಡ ಬ್ಯಾಂಕು ಮಲತಾಯಿ ಧೋರಣೆಯನ್ನು ಅನುಸರಿಸಿತು. ಇದ ರಿಂದ ಸರಕಾರವು ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಿಸುವ ವಿಚಾರವನ್ನೆತ್ತಿತು. ೧೯೫೦ರಲ್ಲಿ ಗ್ರಾಮೀಣ ಬ್ಯಾಂಕಿಂಗ ಪರಿ ಶೀಲನಾ ಸಮಿತಿಯ ಶಿಫಾರಸಿನ ಪ್ರಕಾರ ಇಂಪೀರಿಯಲ್ ಬ್ಯಾಂಕು ಐದು ವರ್ಷಗಳಲ್ಲಿ ೧೧೪ ಹೊಸ ಶಾಖೆಗಳನ್ನು ಸ್ಥಾಪಿ ಸಬೇಕೆಂದು ಕೇಳಿಕೊಳ್ಳಲಾಯಿತು. ಈ ಗುರಿಯನ್ನು ಮುಟ್ಟಲು ಬ್ಯಾಂಕಿಗೆ ಸಾಧ್ಯವಾಗಲಿಲ್ಲ. ಆದುದರಿಂದ ಸರಕಾರವು ಗೋರ ವಾಲಾ ಕಮೀಟಿಯ ಶಿಫಾರಸಿನನ್ವಯ ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಿಸಿ, ಸ್ಟೇಟ ಬ್ಯಾಂಕ ಆಫ್ ಇಂಡಿಯಾವನ್ನು ಸ್ಥಾಪಿಸಿತು. ೧೯೪೮ರ ಔದ್ಯೋಗಿಕ ಧೋರಣೆಯ ಪ್ರಕಾರ ಖಾಸಗಿ ಕ್ಷೇತ್ರದ ಒಡೆತನದಲ್ಲಿದ್ದ ಯಾವುದೇ ಉದ್ದಿಮೆಯನ್ನು ರಾಷ್ಟ್ರೀಕರಿಸುವ ಅಧಿಕಾರ ಸರಕಾರಕ್ಕಿದೆ. ಬ್ಯಾಂಕಿನ ಶೇರ ಧಾರಕರಿಗೆ ಪರಿಹಾರ ಹಣವನ್ನು ಕೊಟ್ಟು ಇಂಪೀರಿಯಲ್ ಬ್ಯಾಂಕಿನ ವ್ಯವಹಾರವನ್ನೆಲ್ಲಾ ಸರಕಾರ ವಹಿಸಿಕೊಂಡಿತು. ಅದರ ಜೊತೆಗೆ ಎಂಟು ಸಂಸ್ಥಾನಗಳ ಬ್ಯಾಂಕುಗಳನ್ನು ಕೂಡ ರಾಷ್ಟ್ರೀಕರಿಸಲಾಯಿತು. ಇಂದು ಸ್ಟೇಟ ಬ್ಯಾಂಕು ಮತ್ತು ಅದರ ಉಪ ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಶಾಖೆ ಗಳನ್ನು ಸ್ಥಾಪಿಸಿ ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕಾರಿಯಾಗಿವೆ. ಒಟ್ಟು ಬ್ಯಾಂಕುಗಳ ಠೇವಿನ ಮತ್ತು ಸಾಲದ ಶೇಕಡಾ ೩೦ರಷ್ಟು ಸ್ಟೇಟ ಬ್ಯಾಂಕಿನದ್ದಾಗಿದೆ. ಬ್ಯಾಂಕಿನ ಕಚೇರಿಗಳು ಇಂದು ೨೩೦೦ಕ್ಕೆ ಮಿಕ್ಕಿವೆ. ರಾಷ್ಟ್ರೀಕರಣದ

ಧೋರಣೆಯನ್ನು ಮುಂದುವರಿಸಿದಲ್ಲಿ ಸಂಪನ್ಮೂಲಗಳ ಮೇಲಿನ ನಿಯಂತ್ರಣ ಅಧಿಕವಾಗುವುದರಲ್ಲಿ ಬರುವುದು. ಇದರಿಂದ ಸರಕಾರಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಿಯಾಗಿ ಕಾರ್ಯಗತಗೊಳಿಸುವಲ್ಲಿ ಅನುಕೂಲವಾಗುವುದು. ರಾಷ್ಟ್ರೀಕರಣದ ಧೋರಣೆ ಕೆಲವೇ ಕ್ಷೇತ್ರಗಳಿಗೆ ಸೀಮಿತವಾದಲ್ಲಿ ಯೋಜನೆಯ ಕಾರ್ಯಗಳು ಯಶಸ್ವಿಯಾಗಲಿಕ್ಕಿಲ್ಲ. ಆದಕ್ಕಾಗಿಯೇ ೧೯೬೮ರಲ್ಲಿ ವಾಣಿಜ್ಯ ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರಣವನ್ನು ಹೇರಲಾಯಿತು. ಸಾಮಾಜಿಕ ನಿಯಂತ್ರಣ ಧೋರಣೆಯನ್ವಯ ವಾಣಿಜ್ಯ ಬ್ಯಾಂಕುಗಳು ಕಾರ್ಯನಿರತವಾದವು. ಗೊತ್ತು ಗುರಿಗಳನ್ನು ಮುಟ್ಟುವ ಪೂರ್ವದಲ್ಲಿಯೇ ಸರಕಾರವು ರಾಷ್ಟ್ರದ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಮುಂದೆ ಕೆಲ ದಿನಗಳಲ್ಲಿಯೇ ಬ್ಯಾಂಕುಗಳ ರಾಷ್ಟ್ರೀಕರಣ ಕಾಯ್ದೆಯಾಯಿತು. ಇಂದು ಭಾರತೀಯ ಬ್ಯಾಂಕಿನ ವ್ಯವಸ್ಥೆಯಲ್ಲಿ ೨೨ ಬ್ಯಾಂಕುಗಳು ರಾಷ್ಟ್ರೀಕೃತ ಭಾಗಕ್ಕೆ ಸೇರಿವೆ. ಇದರಿಂದ ಬ್ಯಾಂಕಿನ ಒಟ್ಟು ವ್ಯವಹಾರದ ಶೇಕಡಾ ೮೫ ರಷ್ಟು ರಾಷ್ಟ್ರೀಕರಿಸಲ್ಪಟ್ಟ ಬ್ಯಾಂಕುಗಳಿಗೆ ಸೇರಿದೆ.

೩ ವಾಣಿಜ್ಯ ಬ್ಯಾಂಕುಗಳು ಮತ್ತು ಕೃಷಿ ಅಭಿವೃದ್ಧಿ

ಭಾರತವು ಕೃಷಿ ಪ್ರಧಾನ ರಾಷ್ಟ್ರ. ಕೃಷಿ ಒಂದು ಉದ್ಯೋಗ ಮಾತ್ರವಲ್ಲದೆ, ಜೀವನಮಾರ್ಗವಾಗಿ ಪರಿಣಮಿಸಿದೆ. ಅದರ ಅಭಿವೃದ್ಧಿಗಾಗಿ ಸಮಯಕ್ಕನುಸಾರವಾಗಿ ಸಾಲದ ಪೂರೈಕೆಯಾಗಬೇಕು. ಒಕ್ಕಲಿಗರು ಒಕ್ಕಲುತನಕ್ಕೆ ಬೇಕಾಗುವ ಉಪಕರಣಗಳನ್ನು ಕೊಂಡುಕೊಳ್ಳಲಿಕ್ಕಾಗಲಿ ಅಥವಾ ಬಾವಿ ಕೆರೆಗಳನ್ನು ತೋಡಿ ನೀರಾವರಿ ಅನುಕೂಲತೆಗಳನ್ನೊದಗಿಸಿಕೊಳ್ಳುವದಕ್ಕಾಗಲಿ ವಿವಿಧ ಪತ್ತಿನ ಸಂಸ್ಥೆಗಳ ಮೊರೆಹೋಗಬೇಕಾಗುತ್ತದೆ. ಅಲ್ಪಾವಧಿಯ ಸಾಲವನ್ನು ಇಂದು ಸಹಕಾರಿ ಸಂಘಗಳು ಪೂರೈಸುತ್ತಿವೆ. ಸರಕಾರವು ತಗಾಯಿ ರೂಪದಿಂದ ಸಾಲವನ್ನು ಕೊಡುತ್ತಿದೆ. ಆದರೆ ಈ ರೂಪದಿಂದ ಬರುವ ಸಾಲ ೧೦೦ಕ್ಕೆ ೧೫ ರಷ್ಟು ಮಾತ್ರ. ಸಾಹುಕಾರರು ಶೇಕಡಾ ೬೯ರಷ್ಟು ಸಾಲವನ್ನು ಪೂರೈಸುವರು. ಹಳ್ಳಿಗಳಲ್ಲಿಯ ವ್ಯಾಪಾರಸ್ಥರು ಕೂಡ ಅಧಿಕ ಬಡ್ಡಿದರದಿಂದ ಸಾಲ ನೀಡುವರು. ವಾಣಿಜ್ಯ ಬ್ಯಾಂಕುಗಳ ಪಾಲು ಶೇಕಡಾ .೪ ರಷ್ಟಾಗಿದೆ. ಸಾಹುಕಾರರನೇಕರು ರಿಜರ್ವ ಬ್ಯಾಂಕಿನ ಕಕ್ಷೆಯಲ್ಲಿ

ಬರದ್ದರಿಂದ ಅಧಿಕ ಬಡ್ಡಿದರದಿಂದ ಒಕ್ಕಲಿಗರನ್ನು ನಿತ್ಯ ಪೀಡಿಸುವುದುಂಟು. ಒಕ್ಕಲಿಗರು ಬೆಳೆದ ಧಾನ್ಯಗಳನ್ನು ಕಡಿಮೆ ದರದಿಂದ ತಮಗೇ ಮಾರಲು ಒತ್ತಾಯಪಡಿಸುತ್ತಿರುವದನು ಕಾಣುತ್ತೇವೆ. ಕೊಟ್ಟ ಸಾಲ ಯಾವುದಕ್ಕೇ ಉಪಯೋಗವಾಗಲಿ ಅವರು ಚಿಂತಿಸುವಂತಿಲ್ಲ. ಅನುತ್ಪಾದಕ ಖರ್ಚಿನ ಬಾಬುಗಳ ಮೇಲಿನ ಹಣ ನಿರರ್ಥಕವಾಗಿ ಹೋಗುವದಲ್ಲದೆ, ಕುಟುಂಬದ ಸಾಲದ ಹೊರೆ ಅನುವಂಶಿಕವಾಗಿ ಮುಂದುವರೆಯುವದು.

ವಾಣಿಜ್ಯ ಬ್ಯಾಂಕುಗಳು ಲಾಭದ ಸಂಸ್ಥೆಗಳು. ಲಾಭದ ಆಶೆಯಿಂದ ಗ್ರಾಮಾಂತರ ಭಾಗಗಳಲ್ಲಿ ಶಾಖೆಗಳನ್ನು ಸ್ಥಾಪಿಸಲು ಹಿಂಜರಿಯುತ್ತವೆ. ಅದಲ್ಲದೆ ಕೃಷಿಗಿಂತ ಅಧಿಕ ಲಾಭ ದೊರೆಯುವ ವ್ಯಾಪಾರ ಉದ್ದಿಮೆಗಳಿಗೆ ಹಣದ ಪೂರೈಕೆಯನ್ನು ಮಾಡುತ್ತವೆ. ೧೯೬೭ ಮಾರ್ಚ ೩೧ರ ಕೊನೆಗೆ ಎಲ್ಲ ಶೆಡ್ಯೂಲ್ಡ ಬ್ಯಾಂಕುಗಳು ೨೭೧೭ ಕೋಟಿ ರೂಪಾಯಿಗಳ ಸಾಲವನ್ನು ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಪೂರೈಸಿದವು. ಅದರ ವಿವರ ಕೆಳಗಿನಂತಿದೆ :

	ಶೇಕಡಾ
೧ ಸಟ್ಟಾ ವ್ಯಾಪಾರ	೧೭.೬
೨ ಜವಳಿ ಗಿರಣಿಗಳು	೯.೯
೩ ಸಕ್ಕರೆ	೩.೯
೪ ಉಕ್ಕು ಮತ್ತು ಕಬ್ಬಿಣ	೩.೭
೫ ರಾಸಾಯನಿಕ ಬಣ್ಣಗಳು	೩.೪

೬	ಜೂಟ	೨.೯
೭	ಉಳಿದ ಅರಿವೆಗಳು	೨.೭
೮	ಬೃಹತ್ ಎಂಜಿನಿಯರಿಂಗ	೮.೪
೯	ಸಣ್ಣ ಎಂಜಿನಿಯರಿಂಗ	೭.೫
೧೦	ಹಣಕಾಸಿನ ಸಂಸ್ಥೆಗಳು	೩.೫
೧೧	ವೈಯಕ್ತಿಕ ಸಾಲಗಳು	೪.೨
೧೨	ಕೃಷಿ	೨.೧
೧೩	ಉಳಿದವುಗಳು	೩೦.೨

ಒಕ್ಕಲುತನದ ಪಾಲು ಕೇವಲ ಶೇಕಡಾ ೨.೧ರಷ್ಟಾಗಿದೆ. ೧೯೫೬ರಲ್ಲಿ ಶೇಕಡಾ ೨ರಷ್ಟಾದರೆ ೧೯೬೧ರಲ್ಲಿ ೩ರಷ್ಟಿತ್ತು. ೧೯೬೬ರಲ್ಲಿ ೨.೪ ರಷ್ಟಿದ್ದರೆ ೧೯೬೭ರಲ್ಲಿ ೨.೧ರಷ್ಟಾಯಿತು. ಇದರಿಂದ ವಾಣಿಜ್ಯ ಬ್ಯಾಂಕುಗಳು ಕೃಷಿ ಅಭಿವೃದ್ಧಿಯನ್ನು ತೀರ ಕಡೆಗಣಿಸಿವೆ ಎಂಬುದು ಸ್ಪಷ್ಟವಾಗುತ್ತದೆ.

ಕೃಷಿ ಬೆಳವಣಿಗೆಗೆ ಬೇಕಾದ ಸಾಲದ ಮೊತ್ತ ದಿನೇ ದಿನೇ ಹೆಚ್ಚುತ್ತಲಿದೆ. ನವೀನ ಉಪಕರಣಗಳನ್ನು ಕೊಳ್ಳಲು ಮತ್ತು ಹೊಸ ಬೇಸಾಯ ಪದ್ಧತಿಯನ್ನು ಕಾರ್ಯಗತಗೊಳಿಸಲು ಸಾಲದ ಪ್ರಮಾಣ ಹೆಚ್ಚುತ್ತಿರುವುದು ಸಹಜ ಸಾಮಾನ್ಯವಾದ ಮಾತಾಗಿದೆ. ದ್ವಿತೀಯ ಮತ್ತು ತೃತೀಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೃಷಿ ಉತ್ಪಾದನೆ ಕುಂಠಿತವಾಯಿತು. ತೃತೀಯ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ಉತ್ಪಾದನೆಯಲ್ಲಿ ಯಾವ ಬದಲಾವಣೆಯೂ ಕಂಡು ಬರಲಿಲ್ಲ. ೧೯೬೪-೬೫ರಲ್ಲಿ ಮಾತ್ರ ಗಣನೀಯವಾದ ಹೆಚ್ಚಳ

ಕಂಡುಬಂತು. ೧೯೬೫–೬೬ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಶೇಕಡಾ ೨೦ರಷ್ಟು ಕಡಿಮೆಯಾಯಿತು. ಅದೇ ಪರಿಸ್ಥಿತಿ ೧೯೬೬–೬೭ರಲ್ಲಿ ಮುಂದುವರಿಯಿತು. ಕೃಷಿ ಕ್ಷೇತ್ರದಲ್ಲಿ ಈ ಕುಂಠಿತ ಪ್ರಗತಿಯು ಮೂಲಕ ಆರ್ಥಿಕ ಬೆಳವಣಿಗೆಯಲ್ಲಿ ಅಷ್ಟೊಂದು ಹೆಚ್ಚಳ ಕಾಣದಾಯಿತು. ಬೆಲೆಗಳು ಏರತೊಡಗಿದವು. ಜನಸಾಮಾನ್ಯರ ನಿತ್ಯ ಬಳಕೆಯ ವಸ್ತುಗಳಲ್ಲಿ ಆಹಾರ ಮತ್ತು ಉಳಿದ ಉಪಭೋಗ ವಸ್ತುಗಳೇ ಅಧಿಕವಾಗಿರುವುದರಿಂದ ಈ ವಸ್ತುಗಳ ಬೆಲೆಗಳ ಸ್ಥಿರೀಕರಣ ಸರಕಾರದ ಆದ್ಯ ಕರ್ತವ್ಯವಾಗಿದೆ. ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸದ ಹೊರತು ಬೆಲೆಗಳು ಕೆಳಗೆ ಬರುವುದು ಕಷ್ಟಸಾಧ್ಯವಾದ ವಿಷಯ. ಸರಕಾರವು ಅಧಿಕ ಉತ್ಪಾದನೆಯ ಕೆಲ ಧಾನ್ಯಗಳನ್ನು ಗೊಬ್ಬರ, ಸುಧಾರಿತ ಉಪಕರಣಗಳು ಸಂಗ್ರಹ ಅನುಕೂಲತೆಗಳು, ಕ್ರಿಮಿನಾಶಕ ವಸ್ತುಗಳು, ಯೋಗ್ಯ ಪ್ರಮಾಣದ ನೀರಿನ ಪೂರೈಕೆ ಮೊದಲಾದವುಗಳಿಂದ ಬೆಳೆಯಲು ಪ್ರೋತ್ಸಾಹ ನೀಡಿತು. ಇದರಿಂದಾಗಿ ರಾಷ್ಟ್ರದ ಆರ್ಥಿಕ ಕ್ಷೇತ್ರದಲ್ಲಿ ಒಂದು ಹಸಿರು ಕ್ರಾಂತಿಯೇ ಪ್ರಾರಂಭವಾಯಿತೆನ್ನಬಹುದು. ೧೯೬೭–೬೮ನೆಯ ವರ್ಷದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ೯೬ ದಶಲಕ್ಷ ಟನ್ನುಗಳಿಗೆ ಮಿಕ್ಕಿತು. ಈ ಹಸಿರು ಕ್ರಾಂತಿಯು ಯಶಸ್ವಿಗಾಗಿ ಗೊಬ್ಬರ, ಆಧುನಿಕ ಉಪಕರಣಗಳನ್ನು ಕೊಳ್ಳಲು ಅಧಿಕ ಪ್ರಮಾಣದಲ್ಲಿ ಸಾಲದ ಪೂರೈಕೆಯಾಗಬೇಕು. ೧೯೭೦–೭೧ರಲ್ಲಿ ಕೃಷಿ ಕ್ಷೇತ್ರದ ಸಾಲದ ಬೇಡಿಕೆಯ ಪ್ರಮಾಣ ೧೨೦೦–೧೪೦೦ ಕೋಟಿ ರೂಪಾಯಿಗಳಿಗೆ ಮಿಕ್ಕಬಹುದೆಂದು ಕೆಲ ಅರ್ಥ

ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸಹಕಾರಿ ಬ್ಯಾಂಕುಗಳು ೬೦೦–೭೦೦ ಕೋಟಿ ರೂಪಾಯಿಯ ಅಲ್ಪಕಾಲೀನ ಮತ್ತು ಮಧ್ಯಮ ಕಾಲೀನ ಸಾಲವನ್ನು ಕೊಡಬಹುದಾಗಿದೆ. ವಾಣಿಜ್ಯ ಬ್ಯಾಂಕುಗಳು ಉಳಿದ ಸಾಲವನ್ನು ಪೂರೈಸುವ ಭಾರವನ್ನು ಹೊರಲೇಬೇಕಾಗುವದು.

ಸಹಕಾರೀ ಪತ್ತು ಸಂಸ್ಥೆಗಳು ಸ್ಥಾಪಿತವಾಗಿ ಇಂದಿಗೆ ೬೫ ವರ್ಷಗಳಾದರೂ ಅವು ಮಾಡುತ್ತಿರುವ ಕಾರ್ಯ ತೃಪ್ತಿಕರ ವಾಗಿಲ್ಲ. ೧೯೫೧ ರಲ್ಲಿ ಗೋರವಾಲಾ ಕಮೀಟಿಯ ವರದಿ ಯನ್ವಯ ಸಹಕಾರೀ ಪತ್ತು ಸಂಘಗಳು ಕೇವಲ ಶೇಕಡಾ ೩ರಷ್ಟು ಸಾಲವನ್ನು ನೀಡಿದವು. ಎಷ್ಟೋ ಸಂಘಗಳಲ್ಲಿ ಕೊಟ್ಟ ಸಾಲ ತಿರುಗಿಬರದೆ ಹಾಗೆ ಕೂಡಿ ಬಿದ್ದಿತ್ತು. ಇದರಿಂದ ಸಹಕಾರಿ ಪತ್ತು ಸಂಸ್ಥೆಗಳ ಪುನಾರಚನೆ ಅವಶ್ಯವೆನಿಸಿತು. ಇಂಪೀರಿಯಲ್ ಬ್ಯಾಂಕು ಗ್ರಾಮಾಂತರ ಪ್ರದೇಶಗಳಲ್ಲಿ ಶಾಖೆಗಳನ್ನು ಸ್ಥಾಪಿಸು ವದನ್ನು ಲಾಭದ ಆಸೆಯಿಂದ ಬಿಟ್ಟಿತು. ಗ್ರಾಮೀಣ ಪತ್ತು ಪರಿಶೀಲನಾ ಸಮಿತಿಯು ಇಂಪೀರಿಯಲ್ ಬ್ಯಾಂಕ ರಾಷ್ಟ್ರೀಕರ ಣದ ಶಿಫಾರಸು ಮಾಡಿತು. ಆದರಂತೆ ಸ್ಟೇಟ ಬ್ಯಾಂಕ ಆಫ್ ಇಂಡಿಯಾ ಅಸ್ತಿತ್ವದಲ್ಲಿ ಬಂದಿತು. ಗ್ರಾಮಾಂತರ ಪ್ರದೇಶ ಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ, ಕೃಷಿ ಮತ್ತು ಸಣ್ಣ ಕೈಗಾರಿಕೆ ಗಳಿಗೆ ಸಾಲದ ಪೂರೈಕೆ ಯೋಗ್ಯ ಪ್ರಮಾಣದಲ್ಲಿ ದೊರೆಯು ವಂತೆ ಮಾಡುವದು ಸ್ಟೇಟ ಬ್ಯಾಂಕಿನ ಮುಖ್ಯ ಉದ್ದೇಶವಾಗಿದೆ. ಸ್ಟೇಟ ಬ್ಯಾಂಕು ಸ್ಥಾಪಿತವಾದ ಮೊದಲ ೫ ವರ್ಷಗಳಲ್ಲಿಯೇ ೪೦೦ ಶಾಖೆಗಳನ್ನು ತೆರೆಯಿತು. ಈಗ ಸ್ಟೇಟ ಬ್ಯಾಂಕ ಮತ್ತು

ಅದರ ಉಪಬ್ಯಾಂಕುಗಳ ಶಾಖೆಗಳ ಸಂಖ್ಯೆ ೧೯೬೮ರಲ್ಲಿ ೨,೨೯೫ ಇದ್ದು ಈಗ ೨,೪೬೨ಕ್ಕೆ ಏರಿದೆ. ಇಂದು ವಾಣಿಜ್ಯ ಬ್ಯಾಂಕುಗಳು ಕೂಡ ರಾಷ್ಟ್ರದ ಆಕಾಂಕ್ಷೆ ಅವಶ್ಯಕತೆಗಳನ್ನು ಗಮನ ದಲ್ಲಿಟ್ಟುಕೊಂಡು ತಮ್ಮ ಅಂತರಿಕ ಧೋರಣೆಯನ್ನು ರೂಪಿಸ ಬೇಕಾಗುವುದು. ಸಾಲಕೊಡುವ ಪದ್ಧತಿಯಲ್ಲಿ ವಿಶೇಷ ಬದಲಾವಣೆ ಅವಶ್ಯವಾದುದು. ನಮ್ಮ ಸಾಧನ ಸಂಪತ್ತುಗಳು ರಾಷ್ಟ್ರೀಯ ಉದ್ದೇಶಗಳಿಗೆ ಸರಿಗೂಡಬೇಕು. ಸಾಲವನ್ನು ಕೊಡುವಾಗ ವ್ಯಕ್ತಿಗೆ ಮಹತ್ವ ಕೊಡದೆ ಅವನ ಉದ್ದೇಶ ಮತ್ತು ಆ ಉದ್ದೇಶಗಳ ಪೂರ್ತಿಗಾಗಿ ಅವನಲ್ಲಿರುವ ಪ್ರಾಮಾಣಿ ಕತೆಗೆ ಪ್ರಾಧಾನ್ಯತೆ ಇತ್ತಲ್ಲಿ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರವು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತಂತಾಗುತ್ತದೆ.

೪ ವಾಣಿಜ್ಯ ಬ್ಯಾಂಕುಗಳು ಮತ್ತು ಸಣ್ಣ ಕೈಗಾರಿಕೆಗಳು

ಬಂಡವಾಳ ಪ್ರಧಾನವಾದ ರಾಷ್ಟ್ರಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲ ವಾತಾವರಣವಿರುತ್ತದೆ. ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರಾಧಾನ್ಯತೆಯನ್ನು ಕೊಡಬೇಕಾಗುವುದು. ಈ ತೆರದ ಕೈಗಾರಿಕೆಗಳಿಗೆ ಬಂಡವಾಳದ ಅವಶ್ಯಕತೆ ಅಷ್ಟೊಂದು ಅಧಿಕ ಪ್ರಮಾಣದಲ್ಲಿ ಇರುವದಿಲ್ಲ. ಮೇಲಾಗಿ ಈ ಕೈಗಾರಿಕೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಉದ್ಯೋಗಿಗಳಾಗುವರು. ದ್ವಿತೀಯ ಮತ್ತು ತೃತೀಯ ಯೋಜನೆಗಳಲ್ಲಿ ಗ್ರಾಮೀಣ ಕೈಗಾರಿಕೆ ಮತ್ತು ಸಣ್ಣ ಉದ್ದಿಮೆಗಳಿಗೆ ಮಹತ್ವವೀಯಲಾಯಿತು. ನಾಲ್ಕನೆಯ ಯೋಜನೆಯಲ್ಲಿ ಈ ಕೈಗಾರಿಕೆಗಳ ಅಭಿವೃದ್ಧಿಗಾಗಿ ೨೯೪·೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗುವುದು. ಸಾಮಾನ್ಯವಾಗಿ ನಾವು ದಿನನಿತ್ಯ ಬಳಸುತ್ತಿರುವ ಬ್ಲೇಡು, ಟೀಕಪ್ಪು, ಉಡಿಗೆ ತೊಡಿಗೆ, ಪೆನ್ನು ಪೆನ್ಸಿಲ್, ಬಲ್ಬುಗಳು, ಗಡಿಯಾರ, ರೇಡಿಯೋ ಗ್ರಾಮಫೋನ, ಔಷಧ, ಮಕ್ಕಳ ಆಟದ ಸಾಮಾನುಗಳು ಮೊದಲಾದವುಗಳು ನಮ್ಮ ದೇಶದಲ್ಲಿಯೇ

ಉತ್ಪಾದನೆಯಾದಲ್ಲಿ ವಿದೇಶೀ ವಿನಿಮಯದ ಉಳಿತಾಯವಾಗಿ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವದು. ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳು ಕೂಡ ನಮ್ಮಲ್ಲಿಯೇ ಉತ್ಪಾದಿತವಾದಲ್ಲಿ ಕೃಷಿ ಅಭಿವೃದ್ಧಿ ಮತ್ತಷ್ಟು ತ್ವರಿತಗತಿಯಿಂದ ಸಾಗುವದು.

ಒಕ್ಕಲಿಗರಂತೆ ಸಣ್ಣ ಉದ್ದಿಮೆದಾರರು ಕೂಡ ಅನೇಕ ಸಮಸ್ಯೆಗಳನ್ನೆದುರಿಸಬೇಕಾಗಿದೆ. ಪ್ರಥಮವಾಗಿ ಯೋಗ್ಯ ಪ್ರಮಾಣದಲ್ಲಿ ಅವರಿಗೆ ಸಾಲ ದೊರೆಯುತ್ತಿಲ್ಲ. ಅವರಾದರೂ ಸಾಹುಕಾರರನ್ನೇ ಅವಲಂಬಿಸಬೇಕಾಗುವದು. ವಾಣಿಜ್ಯ ಬ್ಯಾಂಕುಗಳು ದೊಡ್ಡ ಉದ್ದಿಮೆದಾರರಿಗೆ ಮಾತ್ರ ಅಧಿಕ ಪ್ರಮಾಣದಲ್ಲಿ ಸಾಲದ ಸವಲತ್ತುಗಳನ್ನು ನೀಡುತ್ತವೆಯೇ ಹೊರತು ಸಣ್ಣ ಕೈಗಾರಿಕೆಗಳನ್ನು ಕಡೆಗಣಿಸಿವೆ. ಬ್ಯಾಂಕುಗಳ ಡಾಯರೆಕ್ಟರರು ತಮ್ಮ ಹಿತದ ದೃಷ್ಟಿಯಿಂದ ದೊಡ್ಡ ಉದ್ದಿಮೆಗಳಿಗೆ ಸಾಲ ದೊರೆಯುವಂತೆ ಪತ್ತಿನ ಧೋರಣೆಯನ್ನು ರೂಪಿಸಲು ಕಾರಣೀಭೂತರಾಗಿದ್ದಾರೆ. ಕೈಗಾರಿಕೆಗಳಿಗೆ ಕೊಟ್ಟ ಸಾಲದ ಪ್ರಮಾಣದಲ್ಲಿ ಹೆಚ್ಚಳ ಕಂಡು ಬಂದರೂ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ನೀಡಿದ ಸಾಲದ ಪ್ರಮಾಣ ಕಡಿಮೆಯಾಗಿದೆ ಎನ್ನಬಹುದು. ಒಟ್ಟು ಬ್ಯಾಂಕುಗಳ ಸಾಲದಲ್ಲಿ ಸಣ್ಣ ಉದ್ದಿಮೆಗಳಿಗೆ ನೀಡಿದ ಸಾಲದ ಪ್ರಮಾಣ ಶೇಕಡಾ ೬.೬ರಷ್ಟು ಮಾತ್ರ. ೧೯೬೭ನೆಯ ವರ್ಷದಲ್ಲಿ ಬ್ಯಾಂಕುಗಳು ನೀಡಿದ ಸಾಲದ ಮೊತ್ತ ೨೭೧೭.೨೫ ಕೋಟಿ ರೂಪಾಯಿ ಇತ್ತು. ಉದ್ದಿಮೆಗಳಿಗೆ ೧೭೪೭.೨೫ ಕೋಟಿ ರೂಪಾಯಿ ಸಾಲಕೊಡಲಾಯಿತು. ಈ ಸಾಲದಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೇವಲ ೧೭೮.೫೬ ಕೋಟಿ

ರೂಪಾಯಿಗಳನ್ನು ನೀಡಲಾಯಿತು. ಸಣ್ಣ ಪ್ರಮಾಣದ ಉದ್ದಿಮೆಗಳು ರಾಷ್ಟ್ರದ ಕೈಗಾರಿಕೆ ಉತ್ಪಾದನೆಯಲ್ಲಿ ಶೇಕಡಾ ೪೦ಕ್ಕೆ ಕಾರಣೀಭೂತವಾಗಿದ್ದು ಅವುಗಳಿಗೆ ದೊರೆಯುತ್ತಿರುವ ಸಾಲ ತೀರ ಕಡಿಮೆಯಾಗಿದೆ. ದೊಡ್ಡ ಉದ್ದಿಮೆಗಳಲ್ಲಿ ಬಂಡವಳದ ಕೇಂದ್ರೀಕರಣಕ್ಕಾಗಿ ಮಾತ್ರ ವಾಣಿಜ್ಯ ಬ್ಯಾಂಕುಗಳು ಸಹಾಯಕಾರಿಯಾಗಿವೆ ಎಂಬುದು ತಿಳಿಯುತ್ತದೆ. ಸ್ಟೇಟ ಬ್ಯಾಂಕ ಆಫ್ ಇಂಡಿಯಾ ಸ್ಥಾಪಿತವಾದಂದಿನಿಂದ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹನ ದೊರೆಯುಹತ್ತಿದೆ. ಔದ್ಯಮಿಕ ಅಭಿವೃದ್ಧಿ ಬ್ಯಾಂಕು (IDBI) Credit Guarantee Scheme ದನ್ವಯ ರಾಜ್ಯ ಹಣಕಾಸಿನ ಸಂಸ್ಥೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಪೂರೈಸುತ್ತಿದೆ. ೧೯೬೮-೬೯ರ ವರ್ಷದಲ್ಲಿ ರಿಜರ್ವ ಬ್ಯಾಂಕು ೪೩,೦೪೫ ಸಾಲದ ಅರ್ಜಿಗಳನ್ನು ಸಣ್ಣ ಉದ್ದಿಮೆದಾರರಿಂದ ಸ್ವೀಕರಿಸಿತು. ಪತ್ತಿನ ಸಂಸ್ಥೆಗಳಿಗೆ ಗ್ಯಾರಂಟೀ ದರದಲ್ಲಿ ಸವಲತ್ತನ್ನು ಕೊಡಲಾಯಿತು. ಸ್ಟೇಟ ಬ್ಯಾಂಕ ಮತ್ತು ವಾಣಿಜ್ಯ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ಅಧಿಕ ರೀತಿಯಲ್ಲಿ ಸಾಲದ ಸೌಲಭ್ಯಗಳನ್ನೊದಗಿಸಲು ಅನುಕೂಲವಾಯಿತು. ಕುಶಲ ಕೈಗಾರಿಕೆಗಳು ಮತ್ತು ಸಣ್ಣ ಉದ್ದಿಮೆಗಳ ಉದ್ಯೋಗಪತಿಗಳಿಗೆ ಕೂಡ ಸಾಲದ ಸೌಲಭ್ಯಗಳನ್ನೀಯಲಾಗಿದೆ. ಬ್ಯಾಂಕುಗಳು ನೀಡುವ ಸಾಲದ ಗಾತ್ರದಲ್ಲಿ ಹೆಚ್ಚಳ ಕಂಡು ಬರುತ್ತಿದ್ದಾಗ್ಯೂ ಸಮಾಜವಾದೀ ಸಮಾಜ ರಚನೆಯ ದೃಷ್ಟಿಕೋನದಿಂದ ನೋಡಲಾಗಿ ಅದು ಕಡಿಮೆಯಾಗಿದೆ.

೫ ವಾಣಿಜ್ಯ ಬ್ಯಾಂಕುಗಳು ಮತ್ತು ನಿರ್ಯಾತ ವ್ಯಾಪಾರ

ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರಗಳ ಬೆಳವಣಿಗೆಗೆ ವಿದೇಶೀ ನೆರವಿನ ಅಗತ್ಯ ಅಧಿಕವಾಗಿದೆ. ಈ ವಿದೇಶೀ ಸಹಾಯವು ವಿದೇಶೀ ವಿನಿಮಯ ಮತ್ತು ಯಂತ್ರಸಾಮಗ್ರಿಗಳ ರೂಪದಲ್ಲಿ ದೊರೆಯುವದುಂಟು. ಆಯಾತದ ಮೌಲ್ಯದಲ್ಲಿ ಹೆಚ್ಚಳ ಕಂಡು ಬಂದಾಗ ಸರಕಾರವು ವಿದೇಶೀ ವಿನಿಮಯ ಸಂಗ್ರಹವನ್ನು ಉಪಯೋಗಿಸಬೇಕಾಗುವದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ದೇಶದ ಆಯಾತ ನಿರ್ಯಾತಗಳಲ್ಲಿ ವಿಷಮತೆ ಕಂಡು ಬರುವದು ಸಹಜವಾದುದು. ಯಂತ್ರ ಸಾಮಗ್ರಿ, ಕಚ್ಚಾ ಮಾಲು ತಾಂತ್ರಿಕ ಸಹಾಯಗಳನ್ನು ಆಯಾತ ಮಾಡಿಕೊಳ್ಳಲು ತಕ್ಕ ಮಟ್ಟಿಗೆ ವಿದೇಶೀ ವಿನಿಮಯ ಸಂಗ್ರಹವಿಲ್ಲದಿದ್ದರೆ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳು ಕುಂಠಿತ ಪ್ರಗತಿಯಿಂದ ಕಾರ್ಯಗತವಾಗುವವು. ಸರಕಾರವು ವಿದೇಶೀ ಸಾಲವನ್ನು ಎತ್ತಬೇಕಾಗುವದು. ವಿದೇಶೀ ಸಾಲದ ಭಾರ ಪ್ರತಿವರ್ಷ ಹೆಚ್ಚುತ್ತ ಹೋದರೆ, ದೀರ್ಘಕಾಲೀನ ಕಾರ್ಯಕ್ರಮಗಳು ಸಹ ಸುಸೂತ್ರವಾಗಿ ಸಾಗಲಾರವು. ಆದುದ

ರಿಂದ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ನಿರ್ಯಾತ ವ್ಯಾಪಾರಕ್ಕೆ ಮಹತ್ವಕೊಡಬೇಕಾಗುವದು. ಈ ರಾಷ್ಟ್ರಗಳ ಸರಕುಗಳಿಗೆ ಅಧಿಕ ಬೇಡಿಕೆ ಬರುವಂತೆ ಆಯಾ ಸರಕುಗಳ ಗುಣಮಟ್ಟದಲ್ಲಿ ಸುಧಾರಣೆ ಮತ್ತು ಉತ್ಪಾದನಾ ವೆಚ್ಚದಲ್ಲಿ ಕಡಿತವನ್ನು ಸಾಧಿಸಲು ಕ್ರಮಗಳನ್ನು ಕೈಕೊಳ್ಳುವದು ಅವಶ್ಯವಾಗಿದೆ.

೧೮೬೯ರಿಂದ ಸುಯೇಜ ಕಾಲುವೆ ಮುಕ್ತವಾದಂದಿನಿಂದ ಭಾರತದ ವಿದೇಶಿ ವ್ಯಾಪಾರ ಹೆಚ್ಚುತ್ತ ಬಂದಿದೆ. ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳಲ್ಲಿ ವಿದೇಶಿ ವ್ಯಾಪಾರದ ಮೌಲ್ಯದಲ್ಲಿ ಹೆಚ್ಚಳ ಕಂಡುಬಂತು. ಕೃಷಿಗೆ ಸಂಬಂಧಿಸಿದ ಸರಕುಗಳು ಮತ್ತು ಕಚ್ಚಾ ಮಾಲು ನಮ್ಮ ದೇಶದಿಂದ ನಿರ್ಯಾತವಾಗಿ, ಸಿದ್ಧ ಸರಕುಗಳು ಯಂತ್ರಗಳು ಔಷಧ ಮೊದಲಾದವು ಆಯಾತವಾಗುತ್ತಿದ್ದವು. ಎರಡನೆಯ ಮಹಾಯುದ್ಧದ ಕಾಲದಲ್ಲಿ ನಿರ್ಯಾತ ಮೌಲ್ಯದಲ್ಲಿಯ ಹೆಚ್ಚಳದ ಮೂಲಕ ವಿದೇಶಿ ಸಾಲವನ್ನು ವಾಪಸ್ಸು ಕೊಡಲು ಅನುಕೂಲವಾಯಿತು. ಇದಲ್ಲದೆ ಬ್ಯಾಂಕ್ ಆಫ್ ಇಂಗ್ಲಂಡದಲ್ಲಿ ಭಾರತದ ಪತ್ತು ಸಂಗ್ರಹ ಹೆಚ್ಚಿತು. ಭಾರತದ ನಿರ್ಯಾತ ವ್ಯಾಪಾರದಲ್ಲಿ ಸಿದ್ಧ ಸರಕುಗಳ ಸೇರ್ಪಡೆಯಾಯಿತು. ಕಚ್ಚಾ ಮಾಲು ನಿರ್ಯಾತಗೊಳ್ಳದೆ ದೇಶದಲ್ಲಿಯೇ ಉಪಯೋಗಿಸಲ್ಪಟ್ಟಿತು. ಸ್ವಾತಂತ್ರ್ಯದ ನಂತರ ಭಾರತದ ವಿದೇಶಿ ವ್ಯಾಪಾರದಲ್ಲಿ ಬಹಳ ಬದಲಾವಣೆ ಕಂಡುಬಂತು. ರಾಷ್ಟ್ರವು ಎದುರಿಸುತ್ತಿರುವ ಆಹಾರ ಸಮಸ್ಯೆಯನ್ನು ನೀಗಲು ಆಹಾರ ಧಾನ್ಯಗಳನ್ನೂ ಸಹ ಆಯಾತಮಾಡಿಕೊಳ್ಳಬೇಕಾಯಿತು. ಯೋಜನಾಬದ್ಧ

ಕಾರ್ಯಕ್ರಮಗಳ ಅಭಿವೃದ್ಧಿಗೆ ಯಂತ್ರ ಸಾಮಗ್ರಿ, ಕಚ್ಚಾ ಮಾಲು ಬಿಡಿ ಸಾಮಾನುಗಳು ಮೊದಲಾದವುಗಳನ್ನು ಆಯಾತ ಮಾಡಲೇ ಬೇಕಾಯಿತು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿದೇಶಿ ವಿನಿಮಯ ಸಂಗ್ರಹ ಸಾಕಷ್ಟಿದ್ದುದರಿಂದ ಯಾವದೇ ಆತಂಕ ಉಂಟಾಗಲಿಲ್ಲ. ದ್ವಿತೀಯ ಯೋಜನೆಯ ಆಶೆ ಆಕಾಂಕ್ಷೆಗಳನ್ನು ಈಡೇರಿಸಲು ಅಧಿಕ ಪ್ರಮಾಣದಲ್ಲಿ ವಿದೇಶಿ ವಿನಿಮಯ ಸಂಗ್ರಹ ಬೇಕಾಯಿತು. ೧೯೫೭ರಲ್ಲಿ ಆಯಾತ ಮೌಲ್ಯ ೧೨೧೭ ಕೋಟಿ ರೂಪಾಯಿಗಳಿಗೆ ಹೆಚ್ಚಾದರೆ ನಿರ್ಯಾತ ಮೌಲ್ಯ ಕೇವಲ ೬೨೨ ಕೋಟಿ ರೂಪಾಯಿಗಳಷ್ಟಿತ್ತು. ಈ ಅಂತರವನ್ನು ಕಡಿಮೆಮಾಡಲು ರಿಜರ್ವ ಬ್ಯಾಂಕಿನಲ್ಲಿಯ ಕಾಯ್ದಿಟ್ಟ ಧನದ ಸಂಗ್ರಹದಲ್ಲಿ ಕಡಿತ ಮಾಡಲಾಯಿತಲ್ಲದೆ ಅನಾವಶ್ಯಕ ವಸ್ತುಗಳನ್ನು ಆಯಾತ ಮಾಡದಂತೆ ಲಾಯಸೆನ್ಸ ಕೊಡುವಲ್ಲಿ ಕಟ್ಟು ನಿಟ್ಟುಗಳನ್ನು ಜಾರಿಯಲ್ಲಿ ತರಲಾಯಿತು.

ನಿರ್ಯಾತದಲ್ಲಿ ಹೆಚ್ಚಿಸಲು ನಿರ್ಯಾತ ಪ್ರೋತ್ಸಾಹನ ಮಂಡಲಗಳನ್ನು ಸ್ಥಾಪಿಸಲಾಯಿತು. ನಿರ್ಯಾತಗಾರರಿಗೆ ಪತ್ತಿನ ಸವಲತ್ತುಗಳು ದೊರೆಯುವಂತೆ ನಿರ್ಯಾತ ಪತ್ತು ಮತ್ತು ಜಾಮೀನು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅಧಿಕ ಪ್ರಮಾಣ ದಲ್ಲಿ ಪತ್ತು ದೊರೆಯುವಂತೆ ಔದ್ಯೋಗಿಕ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಲಾಯಿತು. ಈ ಕೆಲ ಸೌಲಭ್ಯಗಳ ಮೂಲಕ ೧೯೬೪ರಲ್ಲಿ ನಿರ್ಯಾತ ವ್ಯಾಪಾರ ೮೩೫ ಕೋಟಿ ರೂಪಾಯಿಗಳಿಗೆ ಏರಿತು. ನಮ್ಮ ರಾಷ್ಟ್ರೀಯ ಆದಾಯದಲ್ಲಿ ನಿರ್ಯಾತದ ಮೌಲ್ಯ ಶೇಕಡಾ ೯ರಷ್ಟು ಮಾತ್ರವಾಗಿದೆ. ಜಪಾನದಲ್ಲಿ

ಇದರ ಪ್ರಮಾಣ ಶೇಕಡಾ ೧೩ ರಷ್ಟಿದೆ. ವಿದೇಶೀ ವ್ಯಾಪಾರದಲ್ಲಿಯ ಹೆಚ್ಚಳದ ಮೂಲಕವಾಗಿಯೇ ನಮ್ಮ ಆರ್ಥಿಕ ಪ್ರಗತಿ ಸಾಧ್ಯವೇ ಹೊರತು ವಿದೇಶಿ ಸಹಾಯದಿಂದಲ್ಲ ಎಂಬುದು ನಮ್ಮ ಧ್ಯೇಯ ಮಂತ್ರವಾಗಬೇಕಾಗಿದೆ. ಕೃಷಿ, ಸಣ್ಣ ಕೈಗಾರಿಕೆಗಳಂತೆ ನಿರ್ಯಾತ ವ್ಯಾಪಾರ ಕೂಡ ಮುಖ್ಯವಾದ ಆರ್ಥಿಕ ಕ್ಷೇತ್ರವಾಗಿದೆ. ವ್ಯಾಪಾರೀ ಬ್ಯಾಂಕುಗಳು ನೀಡುವ ಸಾಲದ ಸೌಕರ್ಯಗಳು ಅಷ್ಟೊಂದು ತಕ್ಕವುಗಳಾಗಿಲ್ಲ. ಭಾರತದಲ್ಲಿ ಬಿಲ್ ಮಾರ್ಕೆಟ್ಟು ಕೆಲ ತೊಂದರೆಗಳ ಮೂಲಕ ಬೆಳೆದು ಬರಲಿಲ್ಲ. ೧೯೫೧ ರಲ್ಲಿ ರಿಜರ್ವ ಬ್ಯಾಂಕು ಬಿಲ್ ಮಾರ್ಕೆಟ ಯೋಜನೆಯನ್ನು ಜಾರಿಯಲ್ಲಿ ತಂದಿತು. ಇದರಿಂದ ವ್ಯಾಪಾರ ಮತ್ತು ಉದ್ಯೋಗ ದಂಧೆಗಳಿಗೆ ಪತ್ತಿನ ಪೂರೈಕೆ ಹೆಚ್ಚಾಯಿತು. ೧೯೫೮ ರಲ್ಲಿ ರಿಜರ್ವ ಬ್ಯಾಂಕು ನಿರ್ಯಾತ ವ್ಯಾಪಾರಕ್ಕೆ ಉತ್ತೇಜನವನ್ನೀಯಲು ನಿರ್ಯಾತ ಬಿಲ್ಲುಗಳನ್ನು ಈ ಯೋಜನೆಯ ಕಕ್ಷೆಯಲ್ಲಿ ತರಲಾಯಿತು. ಬ್ಯಾಂಕುಗಳು ಈ ನಿರ್ಯಾತ ಬಿಲ್ಲುಗಳ ಆಧಾರದ ಮೇಲೆ ರಿಜರ್ವ ಬ್ಯಾಂಕಿನಿಂದ ಸಾಲದ ಸೌಕರ್ಯಗಳನ್ನು ಪಡೆದವು. ಸಣ್ಣ ನಿರ್ಯಾತಗಾರರಿಗೆ ಕೂಡ ಈ ಲಾಭ ದೊರೆಯಬೇಕೆಂದು ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ನಿರ್ಯಾತ ಪತ್ತಿನ ಮೇಲಿನ ಬಡ್ಡಿದರವನ್ನು ಶೇಕಡಾ ೬ ಕ್ಕೆ ಸೀಮಿತಗೊಳಿಸಲಾಯಿತು. ಹೆಚ್ಚಿನ ಸಾಲದ ಸವಲತ್ತುಗಳನ್ನೊದಗಿಸಲು ರಿಜರ್ವ ಬ್ಯಾಂಕಿನ ಕಾಯ್ದೆಯನ್ನು ೧೯೬೨, ೧೯೬೩ರಲ್ಲಿ ತಿದ್ದುಪಡಿ ಮಾಡಲಾಯಿತು. ಈ ಕ್ರಮಗಳ ಫಲವಾಗಿ ೧೯೫೮–೫೯ ಮತ್ತು ೧೯೬೪–

೬೫ರಲ್ಲಿ ನಿರ್ಯಾತ ವ್ಯಾಪಾರವು ಶೇಕಡಾ ೪·೫ ಸಂಯುಕ್ತ ದರದಂತೆ ಹೆಚ್ಚಿತು. ೧೯೬೫ ಮತ್ತು ೧೯೬೬ರಲ್ಲಿ ಕೃಷಿ ಉತ್ಪಾದನೆಯಲ್ಲಿ ಇಳಿಮುಖ ಮತ್ತು ವಿದೇಶಗಳಲ್ಲಿಯು ಕಡಿಮೆ ಬೇಡಿಕೆಗಳ ಮೂಲಕ ನಿರ್ಯಾತ ಕುಂಠಿತವಾಯಿತು. ೧೯೬೬ರಲ್ಲಿ ರೂಪಾಯಿಯು ಅಪಮೌಲ್ಯ ಮಾಡಲಾಯಿತು. ನಿರ್ಯಾತವನ್ನು ಹೆಚ್ಚಿಸಲು ಇದೊಂದು ಕ್ರಮ. ೧೯೬೭–೬೮ರಲ್ಲಿ ನಿರ್ಯಾತದ ಮೌಲ್ಯದಲ್ಲಿ ಶೇಕಡಾ ೩ ರಷ್ಟು ಹೆಚ್ಚಳ ಕಂಡು ಬಂತು. ೧೯೬೮–೬೯ರಲ್ಲಿ ಚಹಾ, ಜವಳಿ, ತಂಬಾಕು, ಕಾಫಿ, ಯಂತ್ರ, ಉಕ್ಕು ಮತ್ತು ಕಬ್ಬಿಣಗಳ ನಿರ್ಯಾತದಲ್ಲಿ ಹೆಚ್ಚಳವಾಯಿತು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ಯಾತ ಮೌಲ್ಯವನ್ನು ಸದ್ಯದ ೧೩೪೦ ಕೋಟಿ ರೂಪಾಯಿಯಿಂದ ೧೯೭೩–೭೪ರಲ್ಲಿ ೧೯೦೦ ಕೋಟಿ ರೂಪಾಯಿ ಮಿಕ್ಕುವಂತೆ ಉದ್ದೇಶಿಸಲಾಗಿದೆ. ಸರಕಾರದ ಧೋರಣೆ ನಿರ್ಯಾತ ಸರಕುಗಳ ಗುಣಮಟ್ಟವನ್ನು ಸುಧಾರಿಸಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವದರಲ್ಲಿ ಕೇಂದ್ರೀಕೃತವಾಗಬೇಕು. ನಿರ್ಯಾತ ಸರಕುಗಳ ಉದ್ದಿಮೆಗಳಿಗೆ ಮೇಲಣ ಉದ್ದೇಶಗಳನ್ನು ಸಾಧಿಸಲು ಅನುಕೂಲವಾಗುವಂತೆ ಹೆಚ್ಚಿನ ಸಾಲ ಸೌಕರ್ಯಗಳು ದೊರೆಯುವಂತೆ ಕ್ರಮ ಕೈಕೊಳ್ಳಬೇಕು.

ವಾಣಿಜ್ಯ ಬ್ಯಾಂಕುಗಳು ನಿರ್ಯಾತಗಾರರಿಗೆ ಸಾಲವನ್ನೀಯುವಾಗ ಸಂಪೂರ್ಣ ನೂರಕ್ಕೆ ನೂರು ಭದ್ರತೆಯನ್ನು ಕೇಳುತ್ತಿದ್ದವು. ನಿರ್ಯಾತ, ಪತ್ತು ಮತ್ತು ಜಾಮೀನ ಸಂಸ್ಥೆಯ ಪ್ರಕಾರ ಬ್ಯಾಂಕುಗಳು ನಿರ್ಯಾತ ವ್ಯಾಪಾರದಲ್ಲಿಯ ವಿವಿಧ

ನಷ್ಟಗಳಿಗನುಗುಣವಾಗಿ ಶೇಕಡಾ ೬೬⅓ ಮತ್ತು ೮೫ ರಷ್ಟು ಭದ್ರತೆಯನ್ನು ಕೇಳಬೇಕಾಗುವದು. ಬಹುಶಃ ಬ್ಯಾಂಕುಗಳು ನಿರ್ಯಾತ ವ್ಯಾಪಾರದಲ್ಲಿಯ ಗಂಡಾಂತರಗಳಿಗೆ ಹಿಂಜರಿಯುತ್ತಿರುವದೇ ಇದಕ್ಕೆ ಕಾರಣವಾಗಿದೆ. ನೂರಕ್ಕೆ ನೂರು ಭದ್ರತೆಗಾಗಿ ಒತ್ತಾಯ ಪಡಿಸಿದರೆ ಉತ್ಪಾದನಾ ವೆಚ್ಚ ಹೆಚ್ಚಾಗುವುದರಿಂದ ವಿದೇಶೀ ಪೇಟೆಯಲ್ಲಿ ನಮ್ಮ ಸರಕುಗಳು ಸ್ಪರ್ಧೆಗಿಳಿಯಲು ಕಷ್ಟವಾಗುತ್ತದೆ. ಆದುದರಿಂದ ನಿರ್ಯಾತ ವ್ಯಾಪಾರ ಹೆಚ್ಚುವಂತೆ ಹಣಕಾಸಿನ ಸಂಸ್ಥೆಗಳೂ ಮತ್ತು ನಿರ್ಯಾತಗಾರರಲ್ಲಿ ವಿಶ್ವಾಸಪೂರಿತ ಸಂಬಂಧ ಅತ್ಯಗತ್ಯವಾದುದು. ಬ್ಯಾಂಕುಗಳ ರಾಷ್ಟ್ರೀಕರಣ ಒಂದು ತಾರಕ ಮಾರ್ಗವಾಗಿದೆ.

೬. ಸಾಮಾಜಿಕ ನಿಯಂತ್ರಣ ಧೋರಣೆ ಮತ್ತು ವಾಣಿಜ್ಯ ಬ್ಯಾಂಕುಗಳು

ಬ್ಯಾಂಕುಗಳು ನೀಡುವ ಸಾಲ ಆರ್ಥಿಕ ಕ್ಷೇತ್ರದ ವಿವಿಧ ಭಾಗಗಳಿಗೆ ಅವುಗಳ ಪ್ರಾಧಾನ್ಯತೆಗನುಗುಣವಾಗಿ ದೊರೆಯು ಲೆಂದು ಸರಕಾರವು ಬ್ಯಾಂಕುಗಳ ಸಾಮಾಜಿಕ ನಿಯಂತ್ರಣ ಧೋರಣೆಯನ್ನು ಕಲ್ಪಿಸಬೇಕಾಯಿತು. ಸಮಾಜದ ಹಿತವನ್ನು ಅಧಿಕವಾಗಿ ಸಾಧಿಸುವದೇ ಸಾಮಾಜಿಕ ಧೋರಣೆಯ ಉದ್ದೇಶ ವಾಗಿತ್ತು. ಲಾಯಸೆನ್ಸು ಮತ್ತು ರಿಜರ್ವ ಬ್ಯಾಂಕಿನ ಪತ್ತು ಧೋರಣೆ, ಬ್ಯಾಂಕಿಂಗ ಕಂಪನಿ ಕಾಯ್ದೆಯ ನಿಯಮಗಳು ವಾಣಿಜ್ಯ ಬ್ಯಾಂಕುಗಳ ನಿತ್ಯ ವ್ಯವಹಾರವನ್ನು ಸಾಕಷ್ಟು ನಿಯಂ ತ್ರಣದಲ್ಲಿ ತಂದಾಗ್ಯೂ ಕೃಷಿ, ಸಣ್ಣ ಕೈಗಾರಿಕೆ ಮತ್ತು ನಿರ್ಯಾತ ವ್ಯಾಪಾರಕ್ಕೆ ದೊರಕಬಹುದಾದ ಸಾಲದ ಮೊತ್ತ ದೊರೆಯ ಲಿಲ್ಲ. ಡಾಯರೆಕ್ಟರರು ತಮ್ಮ ಹಿತಾಸಕ್ತಿಗಳಿಗೆ ಗಮನಕೊಟ್ಟು ದೊಡ್ಡ ಉದ್ದಿಮೆಗಳು ಮತ್ತು ಸಟ್ಟಾ ವ್ಯಾಪಾರಗಳಿಗೆ ಸಾಲವ ನ್ನೊದಗಿಸಲಾರಂಭಿಸಿದರು. ಈ ಧೋರಣೆ ಮುಂದುವರಿದರೆ ಆರ್ಥಿಕ ವ್ಯವಸ್ಥೆಯ ಕೆಲವೇ ಕ್ಷೇತ್ರಗಳಲ್ಲಿ ಆರ್ಥಿಕ ಶಕ್ತಿ ಕೇಂದ್ರೀ ಕೃತವಾಗಿ ಸಮಾಜಕ್ಕೆ ಅನ್ಯಾಯವಾಗುವುದರಲ್ಲಿ ನಿಃಸಂಶಯ.

ಆರ್ಥಿಕ ಸಾಮರ್ಥ್ಯದ ವಿಕೇಂದ್ರೀಕರಣದಿಂದ ಜನತೆಯ ಹಿತಾ ಶಕ್ತಿಗಳಿಗೆ ಬಲಬಂದಂತಾಗುವದು. ಬ್ಯಾಂಕುಗಳ ವ್ಯವಹಾರ ಜನತೆಯ ಉಳಿತಾಯದ ಹಣದಿಂದ ನಡೆಯುವದರಿಂದ ಅದು ಕೆಲ ಜನರ ಸೊತ್ತಾಗದೆ, ಬಹುಜನರ ಹಿತಕ್ಕಾಗಿ ಉಪಯೋಗ ವಾಗಬೇಕಾದುದು ಸರ್ವಸಮ್ಮತವಾದ ವಿಷಯ. ಪ್ರಜಾ ಪ್ರಭುತ್ವದ ಹಿನ್ನೆಲೆಯಲ್ಲಿ ರಚಿತವಾದ ಯೋಜನೆಗಳು ಸಾಮಾ ಜಿಕ ಮತ್ತು ಆರ್ಥಿಕ ನ್ಯಾಯವನ್ನು ಜನತೆಗೆ ನೀಡುವಂತಾಗಬೇ ಕಾದರೆ ಸರಕಾರವು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಅವಶ್ಯ ವಿದ್ದ ಎಲ್ಲ ಚಟುವಟಿಕೆಗಳ ಮೇಲೆ ತನ್ನ ನಿಯಂತ್ರಣವನ್ನು ಹೇರಲೇಬೇಕಾಗುವದು. ಬ್ಯಾಂಕುಗಳ ಮೇಲಿನ ನಿಯಂತ್ರಣ ಪತ್ತನ್ನು ಆಯಾ ಭಾಗಗಳಿಗೆ ಯೋಗ್ಯ ದರದಲ್ಲಿ ನೀಡಲು ಅನುಕೂಲವಾಗುವದಲ್ಲದೆ ಆರ್ಥಿಕ ಪ್ರಗತಿ ತ್ವರಿತಗತಿಯಲ್ಲಿ ಸಾಗುವಂತೆ ಮಾಡುವದು. ಸಾಮಾಜಿಕ ನಿಯಂತ್ರಣದ ಮುಖ್ಯ ಉದ್ದೇಶಗಳಿಂತಿವೆ:—

೧) ಬ್ಯಾಂಕುಗಳ ಆಡಳಿತದಲ್ಲಿ ವ್ಯಾಪಾರೀ ಹಿತಾಸಕ್ತಿ ಗಳನ್ನು ತೊಡೆದು ಹಾಕಿ ಬ್ಯಾಂಕಿನ ವ್ಯವಹಾರ ಎಲ್ಲ ಉದ್ಯೋಗ ದಂಧೆಗಳಿಗೆ ಪ್ರಯೋಜನಕಾರಿಯಾಗು ವಂತೆ ನೋಡಿಕೊಳ್ಳುವದು.

೨) ಬ್ಯಾಂಕುಗಳು ಸಮಾಜದ ಹಿತವನ್ನು ಮುಂದಿಟ್ಟು ಕೊಂಡು ತಮ್ಮ ವ್ಯವಹಾರವನ್ನು ಸಾಗಿಸುವಂತೆ ಅವುಗಳನ್ನು ಪ್ರೋತ್ಸಾಹಿಸುವದು.

ಪ್ರಮಾಣದಲ್ಲಿ ಸಿಗದಾಯಿತು. ಸಟ್ಟಾ ವ್ಯಾಪಾರ ಮತ್ತಿತರ ಅನುತ್ಪಾದಕ ಆರ್ಥಿಕ ಚಟುವಟಿಕೆಗಳಿಗೆ ನೀಡಬಹುದಾದ ಸಾಲದ ಪ್ರಮಾಣದಲ್ಲಿ ಇಳಿಮುಖ ಕಂಡುಬಂತು. ಸಾಮಾಜಿಕ ನಿಯಂತ್ರಣದಿಂದ ಕೃಷಿಕರಿಗೆ, ಸಣ್ಣ ಉದ್ದಿಮೆದಾರರಿಗೆ, ವ್ಯಾಪಾರಸ್ಥರಿಗೆ ಸಾಲದ ಸವಲತ್ತುಗಳು ದೊರೆತುದರಿಂದ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸಲು ಅವರಿಗೆ ಅನುಕೂಲವಾಯಿತು. ಬ್ಯಾಂಕುಗಳು ಈ ಧೋರಣೆಯನ್ನು ಸ್ವಾಗತಿಸಿದುವಲ್ಲದೆ ರಾಷ್ಟ್ರೀಯ ಪತ್ತು ಸಮಿತಿಯ ಆದೇಶಕ್ಕನುಗುಣವಾಗಿ ಸಾಲವನ್ನು ಕೊಡಲಾರಂಭಿಸಿದವು. ಫೆಬ್ರುವರಿ ೧೯೬೯ರ ಕೊನೆಗೆ ಬ್ಯಾಂಕುಗಳು ೧೩೦ ಕೋಟಿ ರೂಪಾಯಿ ಹೆಚ್ಚು ಸಾಲವನ್ನು ಒಕ್ಕಲುತನಕ್ಕೆ ಕೊಟ್ಟವು. ಸಣ್ಣ ಉದ್ದಿಮೆಗಳ ಸಾಲದಲ್ಲಿ ೮೪ ಕೋಟಿ ರೂಪಾಯಿಯ ಹೆಚ್ಚಳ ಕಂಡುಬಂತು. ೧೯೬೮ರಲ್ಲಿ ಬ್ಯಾಂಕುಗಳು ೬೭೫ ಶಾಖೆಗಳನ್ನು ಹೊಸದಾಗಿ ಸ್ಥಾಪಿಸಿದವು. ಅವುಗಳಲ್ಲಿ ೪೮೮ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಉಳಿದ ೧೮೭ ಬ್ಯಾಂಕಿಂಗ ಅನುಕೂಲತೆಗಳಿಲ್ಲದ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟವು. ರಿಜರ್ವ ಬ್ಯಾಂಕಿನ ಆದೇಶದ ಮೇರೆಗೆ ಬ್ಯಾಂಕುಗಳು ೧೯೭೦ರ ಕೊನೆಗೆ ೧೦,೦೦೦ ಜನಸಂಖ್ಯೆಯುಳ್ಳ ಎಲ್ಲ ಪಟ್ಟಣಗಳಲ್ಲಿಯೂ ಬ್ಯಾಂಕಿನ ಶಾಖೆಗಳನ್ನು ಸ್ಥಾಪಿಸುವ ಗುರಿಯನ್ನು ಮುಟ್ಟಬಹುದಾಗಿತ್ತು. ಜುಲೈ ೧೯೯ರ ಬ್ಯಾಂಕುಗಳ ರಾಷ್ಟ್ರೀಕರಣದ ಸುಗ್ರೀವಾಜ್ಞೆ ಜನರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿತು. ಬ್ಯಾಂಕುಗಳ ಬೆಳವಣಿಗೆಗಳ ಇತಿಹಾಸವನ್ನು ಅಭ್ಯಸಿಸಿದಾಗ ಖಾಸಗಿ ಒಡೆತನದಲ್ಲಿಯ ಉದ್ಯೋಗ

ದಂಧೆಗಳಿಗೆ ನೀಡಿದ ಸಹಾಯ ಗಣನೀಯವಾಗಿದೆ. ೧೯೫೧ರಿಂದ ಇಲ್ಲಿಯವರೆಗೆ ಬ್ಯಾಂಕುಗಳು ೨೫೦೦ ಶಾಖೆಗಳನ್ನು ಸ್ಥಾಪಿಸಿದ್ದು ಅವುಗಳ ಠೇವಿನ ಮೊತ್ತ ನಾಲ್ಕು ಪಟ್ಟು ಹೆಚ್ಚಾಗಿದೆ. ಠೇವು ವಿಮೆ ಸಂಸ್ಥೆಯಿಂದ ಠೇವುದಾರರಿಗೆ ಸಾಕಷ್ಟು ಸಂರಕ್ಷಣೆ ದೊರೆತಿದೆ. ರಿಜರ್ವ ಬ್ಯಾಂಕು ಕೂಡ ತನ್ನ ಸಾಲದ ಧೋರಣೆಯ ಮೂಲಕ ವಾಣಿಜ್ಯ ಬ್ಯಾಂಕುಗಳ ವ್ಯವಹಾರವನ್ನು ನಿಯಂತ್ರಿಸುತ್ತ ಬಂದಿರುವಾಗ ೧೪ ಬ್ಯಾಂಕುಗಳ ರಾಷ್ಟ್ರೀಕರಣ ಉದ್ದಿಮೆದಾರರು, ಅರ್ಥಶಾಸ್ತ್ರಜ್ಞರನೇಕರಿಗೆ ಸೋಜಿಗವನ್ನುಂಟು ಮಾಡದೆ ಇರಲಾರದು. ದೇಶವು ಎದುರಿಸಬೇಕಾದ ಬೃಹತ್ ಆರ್ಥಿಕ ಸಮಸ್ಯೆಗಳನ್ನು ಕೂಲಂಕಷವಾಗಿ ವಿಚಾರಿಸಿದಾಗ ಬ್ಯಾಂಕುಗಳ ರಾಷ್ಟ್ರೀಕರಣ ಅನಿವಾರ್ಯವೆಂದು ಕಾಣುತ್ತದೆ. ನಾಲ್ಕನೆಯ ಯೋಜನೆಯ ಗಾತ್ರ ಮತ್ತು ಸಂಪನ್ಮೂಲಗಳ ಸಂಗ್ರಹದ ಅವಶ್ಯಕತೆ ರಾಷ್ಟ್ರೀಕರಣಕ್ಕೆ ಹಾದಿಮಾಡಿಕೊಟ್ಟವು. ದೇಶದಲ್ಲಿ ಎಂಜಿನಿಯರರು ಮತ್ತು ಅನೇಕ ತಂತ್ರಜ್ಞರ ನಿರುದ್ಯೋಗ ಸಮಸ್ಯೆ ಕೂಡ ತಲೆಹಿನ್ನಲಾರಂಭಿಸಿದಾಗ ಸರಕಾರವು ಈ ಕ್ರಮವನ್ನು ಕೈಕೊಳ್ಳಲೇಬೇಕಾಯಿತು.

೭ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ

ದೇಶದ ಹದಿನಾಲ್ಕು ಬೃಹತ್ ಬ್ಯಾಂಕುಗಳನ್ನು ಸರಕಾರವು ಜುಲೈ ೧೯. ೧೯೬೯ ರಂದು ವಿಶೇಷಾಜ್ಞೆಯ ಮೂಲಕ ರಾಷ್ಟ್ರೀಕರಣಗೊಳಿಸಿತು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಯವರು ದೇಶಕ್ಕೆ ನೀಡಿದ ಪ್ರಸಾರ ಭಾಷಣದ ಕನ್ನಡ ರೂಪಾಂತರ ಇಂತಿದೆ :

“.... .... ಪ್ರಜಾರಾಜ್ಯವನ್ನು ರಕ್ಷಿಸಬೇಕಾಗಿದ್ದರೆ ದೇಶದ ಸಾಮಾಜಿಕ ಆರ್ಥಿಕ ಮತ್ತು ರಾಜನೈತಿಕ ವ್ಯವಸ್ಥೆಯು ಕೆಲವೇ ಬಲಿಷ್ಠ ಜನರ ಮುಷ್ಟಿಯೊಳಗೆ ಇರಕೂಡದು. ಯಾವದೇ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಬ್ಯಾಂಕಿಂಗ ಸಂಸ್ಥೆಗಳ ಪಾತ್ರ ದೊಡ್ಡದು. ಉಳಿತಾಯ ಮಾಡಲು ಸಮರ್ಥರಾಗಿರುವ ಜನರ ಹಣವನ್ನು ಕಾಪಾಡುವುದು ಬ್ಯಾಂಕಿನ ಜವಾಬ್ದಾರಿ. ಬ್ಯಾಂಕಿನ ಆಡಳಿತ ವರ್ಗದವರು ನ್ಯಾಯವಾಗಿ ನಡೆದಲ್ಲಿ ಉಳಿತಾಯದಾರರಿಗೆ ಲಾಭ. ಕೋಟಿಗಟ್ಟಲೆ ಸಣ್ಣಪುಟ್ಟ ರೈತರಿಗೆ ಮತ್ತು ಕುಶಲ ಕೆಲಸಗಾರರಿಗೆ ಹಾಗೂ ಇತರ ಸಣ್ಣ ಮಟ್ಟದ ಕೆಲಸಗಳನ್ನು ಮಾಡುತ್ತಿರುವವರಿಗೆ ಸಾಲದ ಸೌಕರ್ಯ ಅಗತ್ಯ.

ಯಾವದೇ ವ್ಯಾಪಾರ ಉದ್ಯೋಗ ಅದು ಎಷ್ಟೇ ಸಣ್ಣದಾಗಿರಲಿ ದೊಡ್ಡದಾಗಿರಲಿ, ಸಾಲದ ಸೌಕರ್ಯವಿಲ್ಲದೆ ಅಭಿವೃದ್ಧಿಯಾಗುವಂತಿಲ್ಲ. ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದೆ. ಇವರಿಗೆ ಕೆಲಸ ದೊರೆಯಬೇಕು... .... ಬ್ಯಾಂಕು ನಮ್ಮ ದೇಶದ ಲಕ್ಷಾಂತರ ಜನರ ಜೀವನದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದೆ. ದೇಶದ ಬ್ಯಾಂಕಿಂಗ ವ್ಯವಸ್ಥೆಯು ನಮ್ಮೆಲ್ಲರ ಸಾಮಾಜಿಕ ಅವಶ್ಯಕತೆಗಳೊಂದಿಗೆ ಹೊಂದಿಕೊಂಡಿರಬೇಕಾದುದು ನ್ಯಾಯ. ರಾಷ್ಟ್ರದ ಉದ್ದೇಶಗಳ ಸಾಧನೆಗೆ ಈ ವ್ಯವಸ್ಥೆ ಸಹಾಯಕವಾಗಬೇಕಾದುದೂ ನ್ಯಾಯವೆ. ಈ ಉದ್ದೇಶದಿಂದ ದೊಡ್ಡ ಬ್ಯಾಂಕುಗಳ ಮೇಲೆ ಬರೇ ಸಾಮಾಜಿಕ ನಿಯಂತ್ರಣವಷ್ಟೇ ಸಾಲದು. ಜನತೆಯ ಪೂರ್ಣ ಅಧಿಕಾರಕ್ಕೆ ಅವು ಒಳಪಡಬೇಕೆಂಬ ಬೇಡಿಕೆ ದೇಶದಲ್ಲಿ ಕೇಳಿಬರುತ್ತಿದೆ. ಇದಕ್ಕಾಗಿ ೧೦-೧೨ ವರ್ಷ ಹಿಂದೆ ಜೀವವಿಮೆಯ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇಂಪೀರಿಯಲ್ ಬ್ಯಾಂಕನ್ನು ಸ್ಟೇಟ ಬ್ಯಾಂಕಾಗಿ ಮಾರ್ಪಡಿಸಲಾಯಿತು. ಇಂದಿನ ಬ್ಯಾಂಕು ರಾಷ್ಟ್ರೀಕರಣ ಈ ದಿಶೆಯಲ್ಲಿ ನಾವಿಟ್ಟ ಪ್ರಮುಖ ಹೆಜ್ಜೆ... ..." ಬ್ಯಾಂಕುಗಳ ರಾಷ್ಟ್ರೀಕರಣ ಭಾರತ ಸರಕಾರವು ಕೈಕೊಂಡ ಹೊಸ ಕ್ರಮವೇನಲ್ಲ. ಸಮಾಜವಾದವನ್ನು ಸ್ವೀಕರಿಸದೆ ಇರುವ ಅನೇಕ ದೇಶಗಳು ಕೂಡ ತಮ್ಮ ದೇಶಗಳಲ್ಲಿಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿವೆ.

ಫ್ರಾನ್ಸದ ಆರ್ಥಿಕ ಯೋಜನೆಗಳಿಗೆ ಬ್ಯಾಂಕಿಂಗ ಪದ್ಧತಿ ಬಹಳೇ ಅನುಕೂಲವಾಗಿದೆ. ರಾಷ್ಟ್ರದ ಉದ್ದೇಶಗಳಿಗನುಗುಣ

ವಾಗಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತವೆ. ೧೯೪೫ರ ಆಜ್ಞೆಯ ಮೇರೆಗೆ ಫ್ರಾನ್ಸದ ನಾಲ್ಕು ದೊಡ್ಡ ಬ್ಯಾಂಕುಗಳು ರಾಷ್ಟ್ರೀಕರಣಗೊಳಿಸಲ್ಪಟ್ಟವು. ಸರಕಾರವು ಮತ್ತು ಬ್ಯಾಂಕ ಆಫ್ ಫ್ರಾನ್ಸ ಬ್ಯಾಂಕಿನ ಪದ್ಧತಿಯನ್ನು ನಿಯಂತ್ರಿಸುವದುಂಟು. “ಬ್ಯಾಂಕ ಸಂಯೋಜನ ಸಮಿತಿ” ಯು (Banking Organisation Committee) ರಾಷ್ಟ್ರೀಯ ಪತ್ತು ಸಮಿತಿ ಮತ್ತು ಬ್ಯಾಂಕರರ ಸಂಘಗಳಲ್ಲಿ ಹೊಂದಾಣಿಕೆಯನ್ನುಂಟು ಮಾಡುವದು. ಫ್ರಾನ್ಸದಲ್ಲಿ ಪ್ರಾದೇಶಿಕ ಬ್ಯಾಂಕುಗಳು ರಾಷ್ಟ್ರೀಕರಿಸಲ್ಪಟ್ಟಿಲ್ಲ. ಸರಕಾರವು ೪ ಬ್ಯಾಂಕುಗಳ ಆಸ್ತಿಪಾಸ್ತಿಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡಾಗ್ಯೂ ಅವುಗಳ ಸ್ವಾಯತ್ತತೆಗೆ ಯಾವುದೇ ಆತಂಕವಾಗಿಲ್ಲ. ಸಣ್ಣ ಬ್ಯಾಂಕುಗಳು ತಮ್ಮ ವ್ಯವಹಾರವನ್ನು ಎಂದಿನಂತೆ ಸಾಗಿಸುತ್ತವೆ.

ಇಟಲಿಯಲ್ಲಿ ಶೇಕಡಾ ೫೦ರಷ್ಟು ಭೂಮಿ ಆಲಿವ್ಹ ಅಥವಾ ಹಣ್ಣುಗಳ ಬೆಳೆಗಳಿಗೆ ಅನುಕೂಲವಾಗಿದೆ. ಬಂದರ, ಸಾರಿಗೆ ಸಂಪರ್ಕಕ್ಕೆ ಸಂಬಂಧಿಸಿದ ಯೋಜನೆಗಳನ್ನು ಬ್ಯಾಂಕುಗಳ ಸಾಲದಿಂದಲೇ ಕಟ್ಟಿದ್ದುಂಟು. ಇಟಲಿ ಜನರು ಮಿತವ್ಯಯಿಗಳೆಂದು ಹೆಸರುವಾಸಿಗಳಾದರೂ ಆರ್ಥಿಕ ಅಭಿವೃದ್ಧಿಗೆ ದೇಶದ ಉಳಿತಾಯ ಸಾಲುವದಿಲ್ಲ. ಇಟಾಲಿಯಲ್ಲಿ ೩೬೫ ವಾಣಿಜ್ಯ ಬ್ಯಾಂಕುಗಳಿವೆ. ಇವಲ್ಲದೆ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳೂ ಉಂಟು. ಸರಕಾರದ ನಿಯಂತ್ರಣ ಈ ಸಂಸ್ಥೆಗಳ ಮೇಲೆ ಹೆಚ್ಚಾಗಿ ಕಂಡುಬರುತ್ತಿದೆ. ಬ್ಯಾಂಕ್ ಆಫ್ ಇಟಲಿ ಇದು ಆ ದೇಶದ ಮಧ್ಯವರ್ತಿ ಬ್ಯಾಂಕಾಗಿದೆ. ೧೯೩೬ರ ಬ್ಯಾಂಕಿಂಗ

ಕಾರ್ಯದ ನಿಯಮಗಳ ಮೇರೆಗೆ ವಾಣಿಜ್ಯ ಬ್ಯಾಂಕುಗಳು ತಮ್ಮ ಕಾರ್ಯ ನಿರ್ವಹಿಸುತ್ತವೆ. ಈ ಬ್ಯಾಂಕುಗಳು ಒಕ್ಕಲು ತನಕ್ಕೆ ಸಾಲ ನೀಡುತ್ತಿಲ್ಲ. ಕೃಷಿಗಾಗಿ ಪ್ರತ್ಯೇಕ ಪತ್ತು ಸಂಸ್ಥೆ ಗಳಿರುತ್ತವೆ. ವಾಣಿಜ್ಯ ಬ್ಯಾಂಕುಗಳು ದೀರ್ಘಾವಧಿ ಸಾಲ ವನ್ನೂ ಕೂಡ ಕೊಡುವದಿಲ್ಲ. ದೀರ್ಘಾವಧಿ ಸಾಲವು IRI (Institute par la Ricostrizione Industrial) ಮೊದ ಲಾದ ಪ್ರತ್ಯೇಕ ಸಂಸ್ಥೆಗಳಿಂದ ಪೂರೈಸಲ್ಪಡುತ್ತದೆ. ವಾಣಿಜ್ಯ ಬ್ಯಾಂಕುಗಳು ಮತ್ತು ಉಳಿತಾಯ ಬ್ಯಾಂಕುಗಳು ಜನರ ಉಳಿ ತಾಯದ ಹಣವನ್ನು ಶೇಖರಿಸಿ ಖಾಸಗೀ ವಿಭಾಗಕ್ಕೆ ಸಾಲ ನೀಡುವದುಂಟು. ಈ ತೆರದ ಬ್ಯಾಂಕಿಂಗ ವ್ಯವಸ್ಥೆ ಯಾವ ಟೀಕೆಗೂ ಎಡೆಗೊಡದೆ ಸಮಾಧಾನಕಾರಕವಾಗಿದೆ.

ನಮ್ಮ ನೆರೆಯ ದೇಶವಾದ ಸಿಲೋನದಲ್ಲಿ ೧೯೬೧ರಿಂದ ಬ್ಯಾಂಕುಗಳ ರಾಷ್ಟ್ರೀಕರಣ ಕಾರ್ಯ ಪ್ರಾರಂಭವಾಯಿತು. ಬ್ಯಾಂಕ ಆಫ್ ಸಿಲೋನ ರಾಷ್ಟ್ರೀಕರಣಗೊಳಿಸಲ್ಪಟ್ಟ ಬ್ಯಾಂಕು ಗಳಲ್ಲಿ ಮೊದಲನೆಯದಾಗಿದೆ. ರಾಷ್ಟ್ರದ ಬ್ಯಾಂಕ ವ್ಯವಹಾರದ ಶೇಕಡಾ ೫೭ರಷ್ಟು ವ್ಯವಹಾರ ಈ ಬ್ಯಾಂಕಿನದಾಗಿತ್ತು. ವಿದೇಶ ಬ್ಯಾಂಕುಗಳನ್ನು ಸಿಲೋನ ಸರಕಾರ ರಾಷ್ಟ್ರೀಕರಿಸದೆ ಬಿಟ್ಟಿತು. ವಿದೇಶ ಬ್ಯಾಂಕುಗಳ ಮೇಲಿನ ನಿಯಂತ್ರಣಗಳನ್ನು ಕೂಡ ಸರಕಾರವು ಇತ್ತೀಚೆಗೆ ಸಡಿಲುಗೊಳಿಸಿದೆ. ೧೯೬೧ರಲ್ಲಿ ಗ್ರಾಮೀಣ ಭಾಗಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ಹಣದ ಸಹಾಯ ನೀಡಲು ಪೀಪಲ್ಸ ಬ್ಯಾಂಕ ಸ್ಥಾಪಿತವಾಯಿತು. ರಾಷ್ಟ್ರೀಕರಣದ ಪರಿ ಣಾಮವಾಗಿ ಬ್ಯಾಂಕುಗಳ ಠೇವಿನ ಮೊತ್ತ ಅಧಿಕವಾಗಿದೆ.

ಹದಿನಾಲ್ಕು ಬ್ಯಾಂಕುಗಳ ಠೇವು ಸಾಲಗಳ ವಿವರ ೩೧-೧೨-೬೮

(ಕೋಟಿ ರೂಪಾಯಿಗಳಲ್ಲಿ)

ಬ್ಯಾಂಕುಗಳು	ಸ್ಥಾಪನೆ ವರ್ಷ	ಶಾಖೆಗಳ ಸಂಖ್ಯೆ	ಠೇವು	ಕೊಂಡ ಹುಂಡಿಗಳು	ಸಾಲ	ಒಟ್ಟು ಠೇವಿನಲ್ಲಿ ಪತ್ತಿನ ಪ್ರಮಾಣ
೧. ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ	೧೯೧೧	೫೦೪	೪೩೩	೫೫	೨೪೧	೬೮.೪
೨. ಬ್ಯಾಂಕ ಆಫ್ ಇಂಡಿಯಾ	೧೯೦೬	೨೫೦	೩೯೫	೩೪	೨೧೯	೬೪.೧
೩. ಪಂಜಾಬ ನ್ಯಾಶನಲ್ ಬ್ಯಾಂಕ	೧೮೯೪	೫೪೪	೩೫೬	೩೪	೧೭೫	೫೮.೭
೪. ಬ್ಯಾಂಕ ಆಫ್ ಬರೋಡಾ	೧೯೦೮	೩೩೩	೩೧೪	೩೦	೧೬೬	೬೨.೪

೫. ಯುನಾಯಿಟೆಡ್ ಕಮರ್ಶಿಯಲ್ ಬ್ಯಾಂಕ	೧೯೪೩	೩೨೩	೨೪೧	೩೯	೧೦೫	೫೯.೮
೬. ಕ್ಯಾನರಾ ಬ್ಯಾಂಕ	೧೯೦೬	೩೦೨	೧೪೬	೨೩	೭೪	೬೬.೪
೭. ಯುನೈಟೆಡ್ ಬ್ಯಾಂಕ ಆಫ್ ಇಂಡಿಯಾ	೧೯೫೦	೧೭೮	೧೪೪	೧೪	೪೬	೬೯.೪
೮. ದೇನಾ ಬ್ಯಾಂಕ	೧೯೩೮	೨೧೪	೧೨೨	೧೫	೫೯	೬೦.೭
೯. ಯೂನಿಯನ್ ಬ್ಯಾಂಕ ಆಫ್ ಇಂಡಿಯಾ	೧೯೧೯	೨೧೩	೧೧೫	೧೮	೫೧	೬೦.೦
೧೦. ಅಲಹಾಬಾದ ಬ್ಯಾಂಕ	೧೮೬೫	೧೨೮	೧೧೩	೭	೬೩	೬೧.೯
೧೧. ಸಿಂಡಿಕೇಟ ಬ್ಯಾಂಕ	೧೯೨೫	೨೫೪	೧೧೨	೧೨	೫೯	೬೩.೪
೧೨. ಇಂಡಿಯನ್ ಓವ್ಹರಸೀಜ ಬ್ಯಾಂಕ	೧೯೩೬	೧೮೮	೯೩	೨೪	೩೪	೬೨.೪
೧೩. ಇಂಡಿಯನ್ ಬ್ಯಾಂಕ	೧೯೦೭	೧೯೦	೮೫	೧೪	೪೩	೬೨.೧
೧೪. ಬ್ಯಾಂಕ ಆಫ್ ಮಹಾರಾಷ್ಟ್ರ	೧೯೩೫	೧೪೦	೭೩	೪	೪೬	೬೮.೫
		—೩೭,೬೧	೨,೭೪೨	೩೨೩	೧,೪೨೧	೬೩.೬

ಅದೇ ಸಮಯಕ್ಕೆ ವಿದೇಶೀ ಬ್ಯಾಂಕುಗಳ ಠೇವಿನ ಪ್ರಮಾಣ ಕಡಿಮೆಯಾಗುತ್ತ ಬಂದಿದೆ.

ರಶಿಯಾದಲ್ಲಿ ಕ್ರಾಂತಿಯ ನಂತರ ಲೆನಿನ್ ಮಹಾ ಮುತ್ಸದ್ದಿಯ ಧೋರಣೆಯ ಮೇರೆಗೆ ರಾಜಕೀಯ ಹಾಗೂ ಆರ್ಥಿಕ ಗುರಿಗಳನ್ನು ಮುಟ್ಟಲು ಅನುಕೂಲವಾಗಲೆಂದು ಹೊಸ ರಾಷ್ಟ್ರೀಯ ಬ್ಯಾಂಕಿಂಗ ಪದ್ಧತಿಯು ಪ್ರಾರಂಭವಾಯಿತು. ಫ್ರೆಂಚ ಮತ್ತು ಅಮೇರಿಕೆಯ ಎರಡು ವಿದೇಶೀ ಬ್ಯಾಂಕುಗಳನ್ನು ಮುಚ್ಚಲಾಯಿತು. ಅಲ್ಲಿಯ ಬ್ಯಾಂಕುಗಳು ಜನಸಾಮಾನ್ಯರ ಬ್ಯಾಂಕುಗಳಾಗಿ ಕಾರ್ಯಮಾಡುತ್ತಿವೆ.

ನಮ್ಮ ದೇಶದಲ್ಲಿ ದೊಡ್ಡ ಬ್ಯಾಂಕುಗಳು ಸಟ್ಟಾ ವ್ಯಾಪಾರ ಮೊದಲಾದ ಅನುತ್ಪಾದಕ ಕ್ಷೇತ್ರಗಳಿಗೆ ಸಾಲನೀಡದೆ ದೇಶದ ಅಭಿವೃದ್ಧಿ ದೃಷ್ಟಿಯಿಂದ ಆಗತ್ಯವಿರುವಲ್ಲಿ ಬಂಡವಾಳದ ವಿನಿಯೋಗ ಮಾಡಬೇಕು. ಈ ಕಾರಣದಿಂದ ಸಾಮಾಜಿಕ ನಿಯಂತ್ರಣ ನೀತಿಯನ್ನು ಮುಂದುವರಿಸದೆ ಸರಕಾರವು ಕೂಡಲೇ ದೇಶದ ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು.

(ರಾಷ್ಟ್ರೀಕರಿಸಲ್ಪಟ್ಟ ಬ್ಯಾಂಕುಗಳ ವಿವರ ೩೮ ಮತ್ತು ೩೯ ನೆಯ ಪುಟಗಳಲ್ಲಿ ಕೊಟ್ಟಿದೆ.)

೧೯೬೯ರ ಜುಲೈ ೧೯ನೇ ದಿನಾಂಕದ ವಿಶೇಷಾಜ್ಞೆಯು ಮೇರೆಗೆ ೫೦ ಕೋಟಿ ರೂಪಾಯಿಗಳಿಗೆ ಮಿಕ್ಕಿ ಠೇವು ಇದ್ದ ೧೪ ದೊಡ್ಡ ಬ್ಯಾಂಕುಗಳನ್ನು ಸರಕಾರವು ತನ್ನ ವಶಕ್ಕೆ ತೆಗೆದು ಕೊಂಡಿತು. ೫೦ ಕೋಟಿ ರೂಪಾಯಿಗಳಿಗೆ ಕಡಿಮೆ ಠೇವು ಇದ್ದ ಬ್ಯಾಂಕುಗಳನ್ನು ಮತ್ತು ಈ ಬ್ಯಾಂಕುಗಳ ವಿದೇಶೀ ಶಾಖೆಗಳನ್ನು ಈ ವಿಶೇಷಾಜ್ಞೆಯು ಕಕ್ಷೆಗೆ ಹೊರಗಿಡಲಾಯಿತು. ಈ ೧೪ ಬ್ಯಾಂಕುಗಳಲ್ಲಿ ಅಲಹಾಬಾದ ಬ್ಯಾಂಕು ಅತಿ ಪ್ರಾಚೀನವಾದುದು. ಪಂಜಾಬ ನ್ಯಾಶನಲ್ ಬ್ಯಾಂಕಿನ ಶಾಖೆಗಳು ೫೪೦ಕ್ಕೆ ಮಿಕ್ಕಿವೆ. ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾದ ಠೇವಿನ ಮೊತ್ತ ಎಲ್ಲ ಬ್ಯಾಂಕುಗಳಿಗಿಂತ ಅಧಿಕವಾಗಿದೆ. ೧೯೬೮ನೇ ಡಿಸೆಂಬರ ಕೊನೆಯ ದಿನಾಂಕ ಈ ಎಲ್ಲ ಬ್ಯಾಂಕುಗಳ ಠೇವಿನ ಮೊತ್ತ ೨,೭೪೦ ಕೋಟಿ ರೂಪಾಯಿಯದಾಗಿತ್ತು. ಸ್ಟೇಟ ಬ್ಯಾಂಕು ಮತ್ತು ಅದರ ಉಪಬ್ಯಾಂಕುಗಳ ಠೇವನ್ನು ಕೂಡಿಸಲು ರಾಷ್ಟ್ರೀಕೃತ ಬ್ಯಾಂಕುಗಳ ಠೇವಿನ ಮೊತ್ತ ೪೨೦೫ ಕೋಟಿ ರೂಪಾಯಿಗಳದಾಗಿದ್ದು, ಎಲ್ಲ ಶೆಡ್ಯೂಲ್ಡ ಬ್ಯಾಂಕುಗಳ ಠೇವಿನ ಹಣದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾಲು ಶೇಕಡಾ ೯೦ಕ್ಕೆ ಮಿಗಿಲಾಯಿತೆನ್ನಬಹುದು. ಜುಲೈ ೧೮, ೧೯೬೯ ರಂದು ಈ ಠೇವಿನ ಮೊತ್ತ ೪೫೬೦ ಕೋಟಿ ರೂಪಾಯಿಗೆ ಹೆಚ್ಚಿತು. ಬ್ಯಾಂಕ ಶಾಖೆಗಳನ್ನು ಅಭ್ಯಸಿಸಲಾಗಿ ಎಲ್ಲ ಬ್ಯಾಂಕ ಶಾಖೆಗಳ ಶೇಕಡಾ ೮೧.೨ ರಷ್ಟು ಶಾಖೆಗಳು ಸ್ಟೇಟ ಬ್ಯಾಂಕು ಮತ್ತು ೧೪ ರಾಷ್ಟ್ರೀಕರಿಸಿದ ಬ್ಯಾಂಕುಗಳಿಗೆ ಸೇರಿವೆ. ಪತ್ತಿನ ಪ್ರಮಾಣದಲ್ಲಿ ಕೂಡ ಈ ಭಾಗದ ಪಾಲು ಅಧಿಕವಾಗಿದೆ.

ಹದಿನಾಲ್ಕು ವಾಣಿಜ್ಯ ಬ್ಯಾಂಕುಗಳ ಠೇವಿನ ಮೊತ್ತ ಡಿಸೆಂಬರ ೧೯೬೮ರಂದು ೨೭೪೦ ಕೋಟಿ ರೂಪಾಯಿ ಇದ್ದಾಗ್ಯೂ ಕ್ಷೇತ್ರ ಬಂಡವಾಳ ಮಾತ್ರ ೨೮.೫ ಕೋಟಿ ರೂಪಾಯಿಯುದಾಗಿತ್ತು. ಬ್ಯಾಂಕುಗಳು ಸಾರ್ವಜನಿಕ ಉಳಿತಾಯದ ಹಣದಿಂದ ತಮ್ಮ ವ್ಯವಹಾರವನ್ನು ಸಾಗಿಸುತ್ತಿದ್ದವು. ಈ ಬ್ಯಾಂಕುಗಳು ನೀಡಿದ ಸಾಲದ ಪ್ರಮಾಣವನ್ನು ನೋಡಿದಾಗ ಒಟ್ಟು ಪತ್ತಿನ ಕೇವಲ ೬ರಷ್ಟು ಮಾತ್ರ ಸಣ್ಣ ಉದ್ದಿಮೆದಾರರಿಗೆ ಕೊಡಲಾಗುತ್ತಿತ್ತು. ಒಕ್ಕಲತನಕ್ಕಂತೂ ಅದರ ಪ್ರಮಾಣ ತೀರ ಕಡಿಮೆಯಾಗಿತ್ತು. ಈ ದೃಷ್ಟಿಯಿಂದ ನೋಡಲಾಗಿ ರಾಷ್ಟ್ರೀಕರಣವು ಅನಿವಾರ್ಯವಾಗಿಯೇ ಕಂಡುಬಂದಿತು. ರಾಷ್ಟ್ರೀಕರಣದಿಂದ ಸರಕಾರವು ರಾಷ್ಟ್ರದ ಸಂಪನ್ಮೂಲಗಳ ಮೇಲೆ ಅಧಿಕ ನಿಯಂತ್ರಣವನ್ನಿರಿಸಿದಂತಾಯಿತು. ಆಯಾ ಆರ್ಥಿಕ ಕ್ಷೇತ್ರಗಳಿಗೆ ಅವುಗಳ ಅವಶ್ಯಕತೆಗಳನುಗುಣವಾಗಿ ಸಾಲ ನೀಡಲು ಅನುಕೂಲವಾಗುವುದು.

೮. ವಿದೇಶೀ ಬ್ಯಾಂಕುಗಳನ್ನು ರಾಷ್ಟ್ರೀಕರಿಸದೆ ಬಿಟ್ಟದ್ದೇಕೆ ?

ವಿದೇಶೀ ಬ್ಯಾಂಕುಗಳು ಮೊದಲು ದೇಶದ ನಿರ್ಯಾತ ಮತ್ತು ಆಯಾತ ವ್ಯಾಪಾರಕ್ಕೆ ಹೆಚ್ಚು ಸಹಾಯಕಾರಿಯಾಗಿದ್ದವು. ಆಗ ಇವು ವಿದೇಶೀ ವಿನಿಮಯ ಬ್ಯಾಂಕುಗಳೆಂದು ಕರೆಯಲ್ಪಡುತ್ತಿದ್ದವು. ದೇಶದ ವಾಣಿಜ್ಯ ಬ್ಯಾಂಕುಗಳಂತೆ ಇವು ಠೇವುಗಳನ್ನು ಸ್ವೀಕರಿಸುವುದು ಮತ್ತು ದೇಶದ ವ್ಯಾಪಾರ ಉದ್ದಿಮೆಗಳಿಗೆ ಸಾಲವನ್ನು ನೀಡುವ ಕಾರ್ಯ ಕೈಕೊಂಡವು. ಬ್ಯಾಂಕಿಂಗ ಕಂಪನಿ ಕಾಯ್ದೆ ನಿಯಮಗಳು ಈ ಬ್ಯಾಂಕುಗಳಿಗೂ ಅನ್ವಯಿಸಲ್ಪಟ್ಟವು. ರಿಜರ್ವ ಬ್ಯಾಂಕಿನ ನಿಯಂತ್ರಣ ಕಕ್ಷೆಯೊಳಗೆ ಈ ಬ್ಯಾಂಕುಗಳನ್ನು ತರಲಾಯಿತು. ಇಂದು ದೇಶದಲ್ಲಿ ೧೩ ವಿದೇಶೀ ಬ್ಯಾಂಕುಗಳಿದ್ದು ಅವು ಕೆಳಗಿನಂತಿವೆ :

೧) ಜನರಲ್ ಬ್ಯಾಂಕ ಆಫ್ ನೆದರ್ಲಂಡ್ಸ

೨) ಅಮೆರಿಕನ್ ಎಕ್ಸಪ್ರೆಸ್

೩) ಬ್ಯಾಂಕ ಆಫ್ ಅಮೇರಿಕಾ ನ್ಯಾಶನಲ್ ಟ್ರಸ್ಟ ಆ್ಯಂಡ ಸೇವ್ಹಿಂಗ್ಸ ಅಸೋಸಿಯೇಶನ್

೪) ಬ್ಯಾಂಕ ಆಫ್ ಟೋಕಿಯೋ

೫) ನ್ಯಾಶನಲ್ ಬ್ಯಾಂಕ್ ಆಫ್ ಪ್ಯಾರಿಸ್
೬) ಬ್ರಿಟಿಶ್ ಬ್ಯಾಂಕ್ ಆಫ್ ದಿ ಮಿಡ್ಲಈಸ್ಟ
೭) ಚಾರ್ಟರ್ಡ ಬ್ಯಾಂಕ
೮) ಈಸ್ಟರ್ನ ಬ್ಯಾಂಕ
೯) ಫಸ್ಟ ನ್ಯಾಶನಲ್ ಸಿಟೀ ಬ್ಯಾಂಕ
೧೦) ಹಾಂಕಾಂಗ ಮತ್ತು ಶಾಂಘಾಯಿ ಬ್ಯಾಂಕಿಂಗ ಕಾರ್ಪೊರೇಶನ್
೧೧) ಮರ್ಕಂಟಾಯಿಲ್ ಬ್ಯಾಂಕ
೧೨) ಮಿತ್ಸು ಬ್ಯಾಂಕ್
೧೩) ನ್ಯಾಶನಲ್ ಮತ್ತು ಗ್ರಿಂಡಲೀಜ ಬ್ಯಾಂಕ

ಈ ಬ್ಯಾಂಕುಗಳ ಒಟ್ಟು ಶಾಖೆಗಳು ೧೨೮ ಇದ್ದು ಠೇವಿನ ಮೊತ್ತ ೪೮೧ ಕೋಟಿ ರೂಪಾಯಿಗಳಷ್ಟು ಮಾತ್ರ ಇದೆ. ಮೇಲಾಗಿ ಈ ಬ್ಯಾಂಕುಗಳು ಸರಕಾರಿ ಭದ್ರತಾ ಸರ್ಟಿಫಿಕೇಟ ಗಳಲ್ಲಿ ಒಟ್ಟು ಠೇವಿನ ಶೇಕಡಾ ೨೭ ರಷ್ಟನ್ನು ವಿನಿಯೋಗಿಸಿವೆ. ಈ ಬ್ಯಾಂಕುಗಳ ಆಡಳಿತದಲ್ಲಿ ಕೂಡ ಭಾರತೀಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ೧೯೭೨ ಕೊನೆಗೆ ೧೦೦ಕ್ಕೆ ೭೦ ರಷ್ಟು ಭಾರತೀಯ ನೌಕರರು ಕೆಲಸ ಮಾಡುವ ಅಂದಾಜಿದೆ. ಕೆಲ ಶಾಖೆಗಳಲ್ಲಿ ಭಾರತೀಯ ಅಧಿಕಾರಿಗಳ ಸಂಖ್ಯೆ ಶೇಕಡಾ ೫೦ಕಿಂತ್ಕ ಮಿಕ್ಕಿದೆ. ವಿದೇಶಿ ಬ್ಯಾಂಕುಗಳು ದೇಶದ ಆರ್ಥಿಕ ಪ್ರಗತಿಗೆ ಅನೇಕ ರೀತಿಯಿಂದ ಸಹಾಯಕಾರಿಯಾಗಿವೆ.

೧) ವಿದೇಶೀ ಬ್ಯಾಂಕುಗಳು ದೇಶದ ನಿರ್ಯಾತ ಮತ್ತು ಆಯಾತ ವ್ಯಾಪಾರಕ್ಕೆ ಎಷ್ಟೋ ಅನುಕೂಲತೆಗಳ ನ್ನೊದಗಿಸುತ್ತವೆ. ಭಾರತೀಯ ನಿರ್ಯಾತಗಾರರು ಮತ್ತು ಆಯಾತಗಾರರು ವಿದೇಶಿ ಬ್ಯಾಂಕುಗಳಿಂದ ಸಾಲದ ಸೌಕರ್ಯಗಳನ್ನು ಪಡೆಯುತ್ತಾರೆ. ಪರದೇಶ ಗಳಲ್ಲಿರುವ ಈ ಬ್ಯಾಂಕುಗಳ ಶಾಖೆಗಳಿಂದ ಸಾಲ ವನ್ನು ದೊರಕಿಸುವಲ್ಲಿ ಸಹಾಯಕಾರಿಯಾಗಿವೆ.

೨) ವಿದೇಶೀ ಬ್ಯಾಂಕುಗಳಿಗೆ ವಿದೇಶೀ ವ್ಯಾಪಾರಿಗಳ ಪರಿಚಯ ಸಾಕಷ್ಟಿರುವದರಿಂದ ನಮ್ಮ ದೇಶದಲ್ಲಿಯ ವ್ಯಾಪಾರಿಗಳು ನಿರ್ಯಾತ ಹುಂಡಿಗಳನ್ನು ಬರೆಯಲು ಸಹಾಯ ಮಾಡುತ್ತಿವೆ. ಇಲ್ಲಿ ಕೆಲ ಉದಾಹರಣೆ ಗಳನ್ನು ಕೊಡಬಹುದಾಗಿದೆ. ಬ್ಯಾಂಕ ಆಫ್ ನೆದ ರ್ಲ್ಯಾಂಡ್ಸ ರತ್ನಗಳನ್ನು ನಿರ್ಯಾತಮಾಡುವಲ್ಲಿ ಮತ್ತು ಕೊರೆಯದೆ ಇದ್ದ ವಜ್ರಗಳನ್ನು ಆಯಾತ ಮಾಡು ವಲ್ಲಿ ವಿಶೇಷ ಸಹಾಯ ನೀಡುತ್ತದೆ. ಹತ್ತಿಯನ್ನು ಜಪಾನಿಗೆ ನಿರ್ಯಾತ ಮಾಡುವಾಗ ಜಪಾನದ ಬ್ಯಾಂಕುಗಳು ಜಪಾನದ ವ್ಯಾಪಾರಿಗಳ ಮೇಲೆ ಹುಂಡಿಗಳನ್ನು ಬರೆಯುವಲ್ಲಿ ಸಹಾಯವನ್ನೊದಗಿ ಸುತ್ತಿವೆ.

೩) ವಿದೇಶೀ ಹಣದ ಸಾಲವನ್ನೆತ್ತುವಾಗ ಕೂಡ ಈ ಬ್ಯಾಂಕುಗಳ ನೆರವು ಅತ್ಯಗತ್ಯ. ಏಅರ್ ಇಂಡಿಯಾ ಬೋಇಂಗ ವಿಮಾನ ಪಡೆಯನ್ನು ಕೊಳ್ಳಲು ಅಮೇರಿ

ಕೆಯ ನ್ಯೂಯಾರ್ಕ ಸಿಟೀ ಬ್ಯಾಂಕ ವಿದೇಶೀ ಹಣದ ಸಾಲವನ್ನು ಎತ್ತುವಲ್ಲಿ ಬಹಳೇ ಸಹಾಯ ಮಾಡಿದೆ. ಭಾರತೀಯ ಹಡಗು ಕಟ್ಟುವ ಕಾರ್ಯದಲ್ಲಿ ಹಾಂಗ ಕಾಂಗ ಬ್ಯಾಂಕಿನ ನೆರವು ಶ್ಲಾಘನೀಯವಾಗಿದೆ.

೪) ವಿದೇಶೀ ಬ್ಯಾಂಕುಗಳು ಪ್ರವಾಸ ಉದ್ದಿಮೆಯ ಪ್ರಗತಿಗೆ ಕಾರಣೀಭೂತವಾಗಿವೆ. ವಿದೇಶೀ ಪ್ರವಾಸಿಕರಿಗೆ ಎಷ್ಟೋ ಸೌಲಭ್ಯಗಳನ್ನು ದೊರಕಿಸಿಕೊಡುತ್ತವೆ. ವಿದೇಶೀ ಪ್ರವಾಸಿಕನು ಹಣದ ಕೊರತೆಯಾದಾಗ ಈ ಬ್ಯಾಂಕುಗಳಿಂದ ಸಾಲವನ್ನೆತ್ತಬಹುದಾಗಿದೆ. ವಿದೇಶೀ ಬ್ಯಾಂಕುಗಳು ಬಹಳ ವರ್ಷಗಳಿಂದ ಭಾರತದಲ್ಲಿ ಕಾರ್ಯಮಾಡುತ್ತಿರುವದರಿಂದ ಇಲ್ಲಿಯ ವ್ಯಾಪಾರ ಮತ್ತು ಬೇಡಿಕೆಗಳ ವಿಷಯವಾಗಿ ಸರಿಯಾದ ಮಾಹಿತಿಯನ್ನು ತಮ್ಮ ದೇಶಗಳಿಗೆ ಕೊಡಬಲ್ಲವು.

೫) ಭಾರತವು ಆರ್ಥಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರವಾಗಿದ್ದು ಸಂಪನ್ಮೂಲಗಳ ಸದುಪಯೋಗವಾಗಬೇಕಾದರೆ ವಿದೇಶಿವಿನಿಮಯದ ಸಂಗ್ರಹ ತಕ್ಕ ಮಟ್ಟಿಗೆ ಬೇಕಾಗುವದು. ವಿದೇಶಿ ಬ್ಯಾಂಕುಗಳು ಮತ್ತು ಭಾರತೀಯ ಬ್ಯಾಂಕುಗಳ ವಿದೇಶಿ ಶಾಖೆಗಳು ದೇಶದ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸುವಲ್ಲಿ ಸಹಾಯಮಾಡಬಲ್ಲವು. ರಾಷ್ಟ್ರ ರಾಷ್ಟ್ರಗಳಲ್ಲಿಯ ಪರಸ್ಪರ ಪ್ರಗತಿಗೆ ವಿದೇಶೀ ಬ್ಯಾಂಕುಗಳು ಅತಿ ಉಪಯುಕ್ತವಾಗಿವೆ.

ವಿದೇಶೀ ಬ್ಯಾಂಕುಗಳನ್ನು ಸರಕಾರವು ರಾಷ್ಟ್ರೀಕರಿಸಿದ್ದಾದರೆ ಅನೇಕ ತೊಂದರೆಗಳನ್ನು ರಾಷ್ಟ್ರವು ಎದುರಿಸಬೇಕಾಗುವದು. ರಾಜಕೀಯ ಪಕ್ಷಗಳು ಈ ವಿಷಯವನ್ನು ಮುಂದೆ ಮಾಡಿ ಬಂಡೆಬ್ಬಿಸಬಹುದು. ಕೂಲಂಕಷವಾಗಿ ವಿಚಾರಿಸಲಾಗಿ ಈ ಬ್ಯಾಂಕುಗಳನ್ನು ರಾಷ್ಟ್ರೀಕರಿಸದೆ ಇದ್ದುದು ಸೂಕ್ತವಾಗಿದೆ. ಬ್ಯಾಂಕುಗಳ ವ್ಯವಹಾರ ನಿಯಂತ್ರಣಕ್ಕಾಗಿ ಆದೇಶ ಮಂಡಲಗಳನ್ನು ಸ್ಥಾಪಿಸಲಾಗಿದೆ.

೯. ಬ್ಯಾಂಕುಗಳ ರಾಷ್ಟ್ರೀಕರಣದ ಉಪಯುಕ್ತತೆಗಳು

ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದ್ದು ಪ್ರಾಮುಖ್ಯವಾಗಿ ಕೃಷಿ, ಸಣ್ಣ ಉದ್ದಿಮೆಗಳು, ವ್ಯಾಪಾರಿಗಳಿಗೆ ಸಾಲದ ಪೂರೈಕೆ ಮಾಡುವದಾಗಿದೆ. ಕನಿಷ್ಟ ಮತ್ತು ಮಧ್ಯಮ ಆದಾಯ ಗುಂಪಿಗೆ ಸೇರಿದ ಜನರಿಗೂ ಕೂಡ ಸಾಲದ ಸೌಕರ್ಯಗಳನ್ನು ಒದಗಿಸುವ ವಿಚಾರ ಸರಕಾರಕ್ಕಿದೆ.

೧) ಒಕ್ಕಲುತನಕ್ಕೆ ಸಾಲದ ಸೌಕರ್ಯಗಳನ್ನು ಒದಗಿಸುವಾಗ ರಾಷ್ಟ್ರೀಕೃತ ಬ್ಯಾಂಕುಗಳು ಸಣ್ಣ ಒಕ್ಕಲಿಗರ ಹಿತಾಸಕ್ತಿಗಳ ಬಗ್ಗೆ ಅಧಿಕವಾಗಿ ಲಕ್ಷ್ಯ ವಹಿಸಬೇಕು. ದೇಶದಲ್ಲಿ ೬೧೦ ಲಕ್ಷ ಒಕ್ಕಲಿಗರಿದ್ದು ಅವರಲ್ಲಿ ೪೪೦ ಲಕ್ಷ ಒಕ್ಕಲಿಗರು ೫ ಎಕರೆಗಳಿಗಿಂತ ಕಡಿಮೆ ಭೂಮಿಯನ್ನು ಸಾಗುವಳಿ ಮಾಡುವವರಿದ್ದಾರೆ. ಅವರಿಗೆ ಹಣದ ಸೌಕರ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಒದಗಿಸದಿದ್ದರೆ ಕೃಷಿ ಉತ್ಪಾದನೆಯಲ್ಲಿ ಸುಧಾರಣೆ ಅಸಾಧ್ಯವಾಗಿ ತೋರುವದು. ದೊಡ್ಡ ಹಿಡುವಳಿದಾರರ ಹಿತಾಸಕ್ತಿಗಳಿಗೆ ಲಕ್ಷ ಕೊಟ್ಟಲ್ಲಿ ರಾಷ್ಟ್ರೀಕರಣದ ಉದ್ದೇಶ ಸಾರ್ಥಕವಾಗದು. ಸರಕಾರವು ಹೊಸ ಪತ್ತಿನ ಧೋರಣೆ

ಯನ್ನು ಈಗ ರೂಪಿಸಿದೆ. ಈ ಧೋರಣೆಯ ಪ್ರಕಾರ ಹೊಸ ಠೇವಿನ ಮೊತ್ತದಲ್ಲಿ ಶೇಕಡಾ ೫೦ ರಷ್ಟು ರೈತರು, ಸಣ್ಣ ಉದ್ದಿಮೆದಾರರು, ಸಣ್ಣ ವ್ಯಾಪಾರಿಗಳಿಗಾಗಿ ದೊರೆಯುವದು. ಅಂದರೆ ಒಕ್ಕಲುತನಕ್ಕೆ ಈ ಠೇವಿನ ಶೇಕಡಾ ೨೦, ಸಣ್ಣ ಕೈಗಾರಿಕೆಗಳಿಗೆ ಶೇಕಡಾ ೧೫, ವ್ಯಾಪಾರ ಮತ್ತು ಕುಶಲ ಕೈಗಾರಿಕೆಗಳಲ್ಲಿ ತೊಡಗಿದವರಿಗೆ ಶೇಕಡಾ ೧೫ ಹೀಗೆ ವಿತರಣ ಮಾಡಲಾಗುವದು. ಹಣಕಾಸು ಖಾತೆಯ ಅಂದಾಜಿನ ಪ್ರಕಾರ ಹೊಸ ಠೇವು ೫೫೦–೬೦೦ ಕೋಟಿ ರೂಪಾಯಿಗಳದ್ದಾದರೆ ಕೃಷಿಗೆ ಸುಮಾರು ೧೧೦ ರಿಂದ ೧೨೦ ಕೋಟಿ ರೂಪಾಯಿ ಪ್ರತಿವರ್ಷ ದೊರೆಯಬಹುದು. ಸಣ್ಣ ಉದ್ದಿಮೆದಾರರಿಗೆ ೮೫ ಕೋಟಿ ರೂಪಾಯಿ ದೊರೆಯುವ ಅಂದಾಜಿದೆ. ಬ್ಯಾಂಕುಗಳ ಶಾಖೆಗಳು ಗ್ರಾಮಾಂತರ ಭಾಗಗಳಲ್ಲಿ ಹೆಚ್ಚಿದರೆ ಈ ಮೊತ್ತ ಇನ್ನೂ ಅಧಿಕವಾಗುತ್ತದೆ. ಸಾಲದ ಸೌಕರ್ಯಗಳನ್ನು ಒದಗಿಸುವಾಗ ಬ್ಯಾಂಕುಗಳು ರೈತರ ಕುಟುಂಬದ ಪರಿಸ್ಥಿತಿ, ಸಾಲದ ಉದ್ದೇಶ, ಭೂಮಿಯ ಗುಣ, ಬೇಸಾಯ ಪದ್ಧತಿ ಮೊದಲಾದವುಗಳನ್ನು ಅಭ್ಯಾಸ ಮಾಡುವದು ಅಗತ್ಯವಾಗಿದೆ. ತೆಗೆದುಕೊಂಡ ಹಣವನ್ನು ಸಣ್ಣ ಕಂತುಗಳಲ್ಲಿ ವಾಪಸು ಕೊಡುವಂತೆ ಸೌಲಭ್ಯ ಮಾಡಿಕೊಡಬೇಕು. ಪ್ರಾಮಾಣಿಕ ರೈತರು ತಪ್ಪದೆ ಸಾಲ ಬಡ್ಡಿಸಹಿತ ವಾಪಸುಮಾಡಿದರೆ ಅವರಿಗೆ ರಿಯಾಯತಿಯ ಲಾಭವನ್ನು ಕೊಟ್ಟರೆ ಪ್ರೋತ್ಸಾಹನ ದೊರೆತಂತಾಗುವದು. ಇಂದು ದೇಶವು ಹಸಿರುಕ್ರಾಂತಿಯ ಪ್ರಗತಿಪಥದಲ್ಲಿದೆ. ನವೀನ ಉಪಕರಣ ಮತ್ತು ಬೇಸಾಯ

ಪದ್ಧತಿಗಳನ್ನು ಜಾರಿಯಲ್ಲಿ ತರಲು ರೈತರು ಮುಂದೆ ಬರುತ್ತಿದ್ದಾರೆ. ರೈತರ ಸಾಲದ ಬೇಡಿಕೆ ಪ್ರತಿ ನಿತ್ಯ ಹೆಚ್ಚುತ್ತಿರುವದರಿಂದ, ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಕೂಡಿಯೇ ಸಾಲ ನೀಡಿದಲ್ಲಿ ಕ್ರಾಂತಿಯು ಗುರಿಮುಟ್ಟಲು ಸುಲಭವಾಗುವದು.

೨) ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಬಡ್ಡಿ ದರದಿಂದ ಸಾಲವನ್ನು ಕೊಡಲಾಗುವದು. ಉತ್ಪಾದನೆಗೆ ಬೇಕಾದ ಕಚ್ಚಾಮಾಲು ಮೊದಲಾದ ನಿತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಯಾವದೇ ಭದ್ರತೆಯಿಲ್ಲದೆ ಸಾಲವನ್ನೊದಗಿಸಲಾಗುವದು. ಸಾಲವನ್ನೊದಗಿಸುವಾಗ ಉದ್ದಿಮೆಯ ಭವಿಷ್ಯತ್ತನ್ನು ವಿಚಾರಿಸಬೇಕಾಗುತ್ತದೆ. ಒಂದು ವೇಳೆ ಅದು ಪ್ರಗತಿ ಪಥದಲ್ಲಿ ಸಾಗುವಂತಿದ್ದರೆ ರಿಯಾಯತಿಯನ್ನು ಕೂಡ ಕೊಡಲಾಗುವದು. ಯಂತ್ರ ಸಾಮಗ್ರಿಗಳನ್ನು ಕೊಳ್ಳುವಾಗ ಮತ್ತು ತಯಾರಾದ ಸಾಮಾನುಗಳನ್ನು ಮಾರುವಾಗ ಬ್ಯಾಂಕುಗಳು ಉಪಯುಕ್ತ ಆದೇಶವನ್ನೀಯುತ್ತವೆ.

೩) ಸಣ್ಣ ವ್ಯಾಪಾರಿಗಳಿಗೆ ಮತ್ತು ಎಂಜಿನಿಯರರು ತಮ್ಮದೇ ವ್ಯವಹಾರವನ್ನು ನಡೆಸುವಂತಿದ್ದರೆ ಅವರಿಗೆ ಸಾಲದ ಸೌಕರ್ಯಗಳನ್ನು ಒದಗಿಸಬಹುದು. ರಿಕ್ಷಾ, ಅಟೋ ರಿಕ್ಷಾ, ಟ್ಯಾಕ್ಸಿ, ಟ್ರಕ್ಕುಗಳ ಚಾಲಕರೂ ಕೂಡ ತಾವು ನಡೆಸುತ್ತಿರುವ ವಾಹನಗಳ ಒಡೆಯರಾಗುವಂತೆ ಸಾಲದ ಸೌಕರ್ಯಗಳನ್ನು ಕೊಡುವ ಯೋಜನೆಯು ಸರಕಾರದ ವಿಚಾರದಲ್ಲಿದೆ. ಅದ

ರಂತೆ ಶಿಕ್ಷಣ ಮತ್ತು ಔಷಧೋಪಚಾರಕ್ಕಾಗಿ ತಿಂಗಳಿಗೆ ೧೫೦ ರೂಪಾಯಿ ಸಂಬಳ ತೆಗೆದುಕೊಳ್ಳುವ ಒಬ್ಬ ಸೇವಕನಿಗೂ ಕೂಡ ೫೦೦ ರೂಪಾಯಿ ಸಾಲ ದೊರೆಯುವಂತೆ ಸೌಲಭ್ಯಗಳನ್ನು ಒದಗಿಸಲಾಗುವದು. ಡಾಕ್ಟರರು, ಎಂಜಿನಿಯರರು ತಮ್ಮ ಸ್ವಂತ ವ್ಯವಹಾರವನ್ನು ಸಾಗಿಸಲು ಅನುಕೂಲವಾಗುವಂತೆ ಸಾಲವನ್ನು ಬ್ಯಾಂಕುಗಳು ಕೊಡಬಹುದು. ಈ ಯೋಜನೆಗಳ ಯೋಜಕ ಸಿಂಡಿಕೇಟ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ. ಎ. ಪೈ ಅವರು.

೪) ರಾಷ್ಟ್ರೀಕರಣದಿಂದ ಠೇವುಗಳ ಭದ್ರತೆ ಹೆಚ್ಚಾಗಿದೆ. ಖಾಸಗೀ ಒಡೆತನದಲ್ಲಿ ವಾಣಿಜ್ಯ ಬ್ಯಾಂಕುಗಳ ಅಕ್ರಮ ವ್ಯವಹಾರಗಳಿಂದ ಅಕಸ್ಮಾತ್ ಬ್ಯಾಂಕು ಗಂಡಾಂತರಕ್ಕೆ ಸಿಲುಕಬಹುದಾಗಿತ್ತು. ಆದರೂ ಠೇವು ವಿಮಾ ಸಂಸ್ಥೆ ಬಂದುದರಿಂದ ಠೇವಿನ ಸಂರಕ್ಷಣೆ ಹೆಚ್ಚಾಗಿತ್ತು. ಗ್ರಾಮಾಂತರ ಪ್ರದೇಶಗಳ ಜನರಿಗೆ ಬ್ಯಾಂಕ ವ್ಯವಹಾರದ ಪೂರ್ಣ ಕಲ್ಪನೆಯನ್ನು ತಿಳಿಸಿಹೇಳಿದರೆ ಅವರ ಉಳಿತಾಯ ಠೇವಿನ ಮೂಲಕ ಬ್ಯಾಂಕುಗಳಲ್ಲಿ ಸಂಗ್ರಹವಾಗುವದು. ಭಾರತದಂತಹ ಹಿಂದುಳಿದ ರಾಷ್ಟ್ರದಲ್ಲಿ ಬ್ಯಾಂಕುಗಳು ಮುಖ್ಯವಾಗಿ ಸಂಪನ್ಮೂಲಗಳ ಸಂಗ್ರಹದಲ್ಲಿ ನಿರತವಾಗಬೇಕು. ಅದಕ್ಕೆ ಭದ್ರತೆಯ ರಕ್ಷೆ ಇದ್ದಾಗ ಅಧಿಕ ಪ್ರಮಾಣದಲ್ಲಿ ಜನರು ಮುಂದೆ ಬರುವರು.

೫) ರಾಷ್ಟ್ರೀಕರಣದಿಂದ ಪ್ರಾದೇಶಿಕ ಆರ್ಥಿಕ ವಿಷಮತೆಯನ್ನು ಹೋಗಲಾಡಿಸಬಹುದು. ಸದ್ಯದ ಪರಿಸ್ಥಿತಿಯಲ್ಲಿ

ಬ್ಯಾಂಕ ಪತ್ತು ರಾಜ್ಯಗಳಲ್ಲಿ ಸಮನಾಗಿ ವಿತರಣವಾಗಿಲ್ಲ. ೩೧೦೦ ಕೋಟಿ ರೂಪಾಯಿಗಳ ಪತ್ತನ್ನು ಬ್ಯಾಂಕುಗಳು ಬೇರೆ ಬೇರೆ ರಾಜ್ಯಗಳಲ್ಲಿ ವಿನಿಯೋಗಿಸುತ್ತಿರುವದು ಕಂಡು ಬರುತ್ತದೆ. ಮಹಾರಾಷ್ಟ್ರ ರಾಜ್ಯಕ್ಕೆ ೯೨೭ ಕೋಟಿ ರೂಪಾಯಿಗಳ ಪತ್ತಿನ ಸೌಲಭ್ಯ ಕೊಡಲ್ಪಟ್ಟರೆ ಮೈಸೂರಿಗೆ ಕೇವಲ ೧೯೭ ಕೋಟಿ ರೂಪಾಯಿಯಷ್ಟು ದೊರೆತಿದೆ. ಇದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಅಸಮತೆ ಕಂಡು ಬಂದು ಒಂದು ರಾಜ್ಯದ ತಲಾ ಉತ್ಪನ್ನ ಮತ್ತೊಂದು ರಾಜ್ಯದ ತಲಾ ಉತ್ಪನ್ನಕ್ಕಿಂತ ಕಡಿಮೆಯಾಗುವುದರಿಂದ ಜನತೆಯ ಜೀವನ ಮಟ್ಟದಲ್ಲಿ ವಿರೀತ ಉಂಟಾಗುವದು.

೭) ಬ್ಯಾಂಕುಗಳ ರಾಷ್ಟ್ರೀಕರಣದಿಂದ ನೌಕರವರ್ಗದವರಲ್ಲಿ ಕಾರ್ಯಕ್ಷಮತೆ ಕುಂಠಿತವಾಗಿ ಬ್ಯಾಂಕ ವ್ಯವಹಾರದಲ್ಲಿ ಇಳಿಮುಖ ಕಂಡುಬರಬಹುದೆಂಬ ಸಂಶಯವಿದೆ. ಬ್ಯಾಂಕುಗಳು ತಮ್ಮ ವ್ಯವಹಾರವನ್ನು ಎಂದಿನಂತೆ ಸಾಗಿಸಬೇಕಾದರೆ ರಾಷ್ಟ್ರೀಕೃತ ಬ್ಯಾಂಕುಗಳು ತರಬೇತಿ ಹೊಂದಿದ ನೌಕರರನ್ನು ನಿಯಮಿಸಬೇಕು. ಇವರನ್ನು ನಿಯಮಿಸುವಾಗ ರಾಜಕೀಯ ಮುಖಂಡರು ವರ್ಚಸ್ಸು ತರದಂತೆ ಜಾಗರೂಕರಾಗಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಂದಿಲ್ಲ ನಾಳೆ ಒಂದೇ ತರದ ಸಂಬಳ ಶ್ರೇಣಿಯನ್ನು ಅನುಸರಿಸಬೇಕಾಗುವದು. ಬ್ಯಾಂಕ ಆಫ್ ಇಂಡಿಯಾ ಕೊಡುತ್ತಿರುವ ವೇತನ ಶ್ರೇಣಿಯನ್ನು ಇತರ ಬ್ಯಾಂಕುಗಳ ನೌಕರರಿಗೂ ಅನ್ವಯಿಸಿದರೆ ಅವರ ಕಾರ್ಯಕ್ಷಮತೆ ಹೆಚ್ಚುವದರಲ್ಲಿ ನಿಃಸಂಶಯ. ನೌಕರಿಯಲ್ಲಿಯ ಭದ್ರತೆ ಸಂಬ

ಳದ ಹೆಚ್ಚಳ ಬ್ಯಾಂಕಿನ ಕಾರ್ಯಾಚರಣೆಯಲ್ಲಿರಬೇಕಾದ ಕಾರ್ಯಕ್ಷಮತೆಗೆ ಸಹಾಯಕಾರಿಯಾಗುವವು. ಬ್ಯಾಂಕಿನ ನೌಕರರಿಗೂ ಬ್ಯಾಂಕಿನ ಆಡಳಿತದಲ್ಲಿ ಭಾಗಿದಾರರಾಗುವಂತೆ ಅವರಿಗೆ ಪ್ರಾತಿನಿಧ್ಯ ದೊರೆಯಬೇಕು.

ಬ್ಯಾಂಕ ರಾಷ್ಟ್ರೀಕರಣದ ಗುಣದೋಷಗಳನ್ನು ವಿವೇಚಿಸಿದಾಗ ಸಮಾಜವಾದೀ ಸಮಾಜ ರಚನೆಯ ಗುರಿಯನ್ನು ಸಾಧಿಸಲು ರಾಷ್ಟ್ರೀಕರಣವು ಒಂದು ಸಾಧನ ಮಾತ್ರವಾಗಿದೆ.

೧೦ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ : ಕೆಲ ಸಮಸ್ಯೆಗಳು

೧೯೫೬ರ ಔದ್ಯೋಗಿಕ ಧೋರಣೆಯ ಮೇರೆಗೆ ಸರಕಾರವು ಖಾಸಗಿ ಒಡೆತನದಲ್ಲಿಯ ಯಾವುದೇ ಉದ್ದಿಮೆಯನ್ನು ತನ್ನ ಒಡೆತನಕ್ಕೆ ತೆಗೆದುಕೊಳ್ಳಬಹುದು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ಕ್ರಮ ಕೈಕೊಳ್ಳುವಾಗ ಸರಕಾರವು ಈ ಉದ್ದಿಮೆಗಳಿಗೆ ಕೊಡಬಹುದಾದ ಪರಿಹಾರ ಹಣದ ಬಗ್ಗೆ ವಿಚಾರಿಸಬೇಕಾಗುತ್ತದೆ.ಪರಿಹಾರ ಹಣವನ್ನು ಯಾವ ಪ್ರಮಾಣ ದಲ್ಲಿ ಕೊಡಬೇಕು ಮತ್ತು ಎಷ್ಟು ಕೊಡಬೇಕು ಎಂಬುದರ ಬಗ್ಗೆ ಇನ್ನೂ ನಿರ್ಣಯವಿಲ್ಲ. ಶೇರುಗಳ ಮಾರ್ಕೆಟ್ ಮೌಲ್ಯದ ಆಧಾರದ ಮೇಲೆ ೭೦-೭೫ ಕೋಟಿ ರೂಪಾಯಿ ಪರಿಹಾರ ಹಣವನ್ನು ರಾಷ್ಟ್ರೀಕರಿಸಲ್ಪಟ್ಟ ಬ್ಯಾಂಕುಗಳಿಗೆ ಕೊಡಲಾಗು ವದು. ಪರಿಹಾರ ಹಣದ ವಿಷಯು ಸ್ವಲ್ಪ ವಾದಗ್ರಸ್ತವೆಂದೇ ಹೇಳಬಹುದು. ರಿಜರ್ವ ಬ್ಯಾಂಕನ್ನು ರಾಷ್ಟ್ರೀಕರಣ ಮಾಡಿ ದಾಗ ಶೇರದಾರರಿಗೆ ೧೯೪೭-೪೮ರಲ್ಲಿಯ ಶೇರ ಕಿಮ್ಮತ್ತಿನ ಸರಾಸರಿ ಮೌಲ್ಯದ ಆಧಾರದ ಮೇಲೆ ಪ್ರತಿ ೧೦೦ ರೂ. ಶೇರಿಗೆ ೧೧೮-೧೦-೦ ಕೊಡಲಾಯಿತು. ಶೇರದಾರರು ಪ್ರತಿ

ನೂರು ರೂಪಾಯಿಗೆ ೧೫೦ ರೂ. ನಿರೀಕ್ಷೆ ಮಾಡಿದ್ದರು. ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಣ ಮಾಡಿದಾಗ ಪ್ರತಿ ಶೇರಿಗೆ ಅದರ ಮೂಲ ಮೌಲ್ಯದ ೩½ ಪಟ್ಟು ಹಣವನ್ನು ಪರಿಹಾರವಾಗಿ ನೀಡಲಾಯಿತು. ಸಣ್ಣ ಶೇರದಾರರಿಗೆ ೧೦,೦೦೦ ರೂಪಾಯಿಗಳ ವರೆಗೆ ನಗದು ಹಣ, ಉಳಿದುದನ್ನು ಸರಕಾರದ ಭದ್ರತಾ ಸರ್ಟಿಫಿಕೆಟ್‌ಗಳ ರೂಪದಲ್ಲಿ ಕೊಡಲಾಯಿತು. ಜಮೀನ ದಾರಿ ನಿರ್ಮೂಲನ ಕಾಲದಲ್ಲಿ ೨·೫ ಬಡ್ಡಿ ದರದ ೪೦ ವರ್ಷಗಳ ಬಾಂಡ ರೂಪದಲ್ಲಿ ಬಿಹಾರ ರಾಜ್ಯದ ಜಮೀನ ದಾರರಿಗೆ ಪರಿಹಾರ ಕೊಡಲಾಯಿತು. ಸರಕಾರವು ಪರಿಹಾರ ಹಣದ ೫೦೦೦ ರೂಪಾಯಿ ನಗದು ಹಣದ ರೂಪದಲ್ಲಿ ಉಳಿ ದುದನ್ನು ೪·೫ ಬಡ್ಡಿ ದರದ ಸರಕಾರದ ಸೆಕ್ಯೂರಿಟಿಗಳ ರೂಪದಲ್ಲಿ ಕೊಡಲಾಗುವದೆಂದು ತಿಳಿಸಿದೆ. ಪರಿಹಾರ ಹಣದ ರೂಪದಲ್ಲಿ ಕೊಡಲಾದ ಹಣದ ಗಾತ್ರ ದೇಶದ ಹಣಕಾಸಿನ ಚಲಾವಣೆಯ ಮೇಲೆ ಪರಿಣಾಮ ಮಾಡದೆ ಇರದು. ನಗದು ಹಣ ರಾಷ್ಟ್ರೀಕರಿಸದೆ ಉಳಿದ ಬ್ಯಾಂಕುಗಳಿಗೆ ಹೊಸ ಠೇವಿನ ರೂಪದಲ್ಲಿ ಬಂದರೆ ಪತ್ತಿನ ಪ್ರಮಾಣ ಅಧಿಕವಾಗಿ ಬೆಲೆಗಳಲ್ಲಿ ಹೆಚ್ಚಳ ಕಂಡುಬರಬಹುದೆಂಬ ಭಯವಿದೆ. ಇದೇ ರೀತಿಯ ಸಂಶಯ ಜಮೀನದಾರಿ ನಿರ್ಮೂಲನದ ಕಾಲದಲ್ಲಿ ಉದ್ಭವಿ ಸಿತ್ತು.

ರಾಷ್ಟ್ರೀಕರಣ ಕಾಯ್ದೆಯನ್ವಯ ಬ್ಯಾಂಕಿನ ಆಡಳಿತವು ಕಸ್ಟೋಡಿಯನ್ನನಿಗೆ ಸೇರಿದ್ದಾಗಿದೆ. ಬ್ಯಾಂಕ ವ್ಯವಹಾರದ ಮುಖ್ಯ ಸೂತ್ರಧಾರನಾಗಿ ಕಸ್ಟೋಡಿಯನ್ ಕೆಲಸ ನಿರ್ವಹಿ

ಸುತ್ತಾನೆ. ಜುಲೈ ೧೯, ೧೯೬೯ರ ಮೊದಲಿದ್ದ ಚೇರಮನ್ನರೇ ಕಸ್ಟೋಡಿಯನ್ನರಾಗಿ ಕಾರ್ಯ ನಿರ್ವಹಿಸುತ್ತಿರುವರು. ಬ್ಯಾಂಕಿನ ಆಡಳಿತವು ಸರಕಾರವು ಕಾಲಕಾಲಕ್ಕೆ ನೀಡುವ ಆದೇಶಗಳಂತೆ ನಡೆಯುತ್ತದೆ. ಕಸ್ಟೋಡಿಯನ್ನನಿಗೆ ಸಹಾಯವಾಗಲೆಂದು ಆದೇಶ ಮಂಡಲವು ಇರುತ್ತದೆ. ಕೆಲಕಾಲದ ನಂತರ ಈ ಆದೇಶ ಮಂಡಳದ ಬದಲಾಗಿ ಡಾಯರೆಕ್ಟರರ ಮಂಡಳವನ್ನು ಸ್ಥಾಪಿಸಲಾಗುವದು. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಆರ್ಥಿಕ ಹಾಗೂ ಸಾಮಾಜಿಕ ಗುರಿಗಳನ್ನು ಮುಟ್ಟಲು ದೇಶವು ಸಮರ್ಥ ವಾಗುವದೆಂಬುದು ತಾತ್ವಿಕವಾಗಿ ಸಮಂಜಸವೆನಿಸುವದು. ಬ್ಯಾಂಕ ವ್ಯವಹಾರದ ೬/೭ ಭಾಗವು ಸರಕಾರದ ಒಡೆತನಕ್ಕೆ ಸೇರಿದುದರಿಂದ ಈ ಬ್ಯಾಂಕುಗಳ ಆಡಳಿತವು ಸುಗಮವಾಗಿ ಸಾಗಬೇಕಾದರೆ ಸುಭದ್ರವಾದ ಆಡಳಿತ ಯಂತ್ರದ ಆವಶ್ಯಕತೆ ಯುಂಟು. ಸರಕಾರವು ಜನರ ಬೇಡಿಕೆಗಳನ್ನು ಸರಿಯಾಗಿ ಪೂರೈಸಬಲ್ಲದೋ ಹೇಗೆ ? ಎಂಬುದರ ಬಗ್ಗೆ ಕೆಲ ತಜ್ಞರು ಸಂಶಯ ವ್ಯಕ್ತಪಡಿಸಿದ್ದಾರೆ. ಬ್ಯಾಂಕುಗಳ ಕಾರ್ಯ ಪ್ರಾಮುಖ್ಯ ವಾಗಿ ಉಳಿತಾಯವನ್ನು ಸಂಗ್ರಹಿಸುವದು ಮತ್ತು ಅದರ ವಿನಿಯೋಗ ಸರಿಯಾಗಿ ಆಗುವಂತೆ ಪತ್ತನ್ನು ಒದಗಿಸುವದು. ಉಳಿತಾಯ ಸಂಗ್ರಹ ಬ್ಯಾಂಕುಗಳಲ್ಲಿ ಜನತೆಯ ವಿಶ್ವಾಸವನ್ನು ಹೆಚ್ಚಾಗಿ ಅವಲಂಬಿಸಿದೆ. ಭಾರತದಂತಹ ಹಿಂದುಳಿದ ರಾಷ್ಟ್ರ ಗಳಲ್ಲಿ ಜನತೆಯ ಉಳಿತಾಯವನ್ನು ಸಂಗ್ರಹಿಸುವ ಪೂರ್ವ ದಲ್ಲಿ ಬ್ಯಾಂಕಿಂಗ ವ್ಯವಹಾರದ ಪ್ರಚಾರ ಅಗತ್ಯವಾದುದು. ಆಡಳಿತದಲ್ಲಿ ಕಾರ್ಯಕ್ಷಮತೆ ಹೆಚ್ಚಬೇಕಾದರೆ ಕೆಲಮಟ್ಟಿಗಾ

ದರೂ ಪೈಪೋಟಿ ಅನಿವಾರ್ಯವಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳು ಎಂದಿನಂತೆ ತಮ್ಮ ವ್ಯವಹಾರವನ್ನು ಸಾಗಿಸುತ್ತಿದ್ದರೂ ಅವುಗಳಲ್ಲಿಯ ಸ್ಪರ್ಧೆ ಕೃತ್ರಿಮವಾಗಿ ಕಂಡುಬರುತ್ತಿದೆ. ಖಾಸಗಿ ಒಡೆತನದಲ್ಲಿದ್ದ ಬ್ಯಾಂಕುಗಳ ಒಂದು ಸಾಹಸ, ಕರ್ತೃತ್ವ ಶಕ್ತಿ, ಮುಂಧೋರಣೆ ಸರಕಾರಿ ನೌಕರರಲ್ಲಿ ಬರಲಿಕ್ಕಿಲ್ಲ. ಆಡಳಿತ ವರ್ಗವು ನಿಷ್ಕಾಳಜಿಯಿಂದ ವರ್ತಿಸಿದಲ್ಲಿ ಪತ್ತನ್ನು ಪೂರೈಸುವಲ್ಲಿ ಕೂಡ ಅಕ್ರಮ ವ್ಯವಹಾರ ನಡೆಯುಬಹುದೆಂಬ ಭಯವಿದೆ. ಸರಕಾರವು ಜಾಗರೂಕತೆಯನ್ನು ವಹಿಸಿ ಬ್ಯಾಂಕಿನ ಆಡಳಿತಗಾರರಿಗೆ ತಾವೇ ಸಮಯೋಚಿತ ನಿರ್ಣಯುಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನೀಯುಬೇಕು. ಸರಕಾರದ ಆದೇಶ ಮತ್ತು ಬ್ಯಾಂಕಿನ ವಿನಿಯೋಗ ನೀತಿಯಲ್ಲಿ ತಾಕಲಾಟವಾಗದಂತೆ ಜಾಗರೂಕತೆ ವಹಿಸುವದು ಅವಶ್ಯವೆನಿಸುವದು. ಆದುದರಿಂದ ಸರಕಾರದ ಆಡಳಿತದಲ್ಲಿ ಕಾರ್ಯಕ್ಷಮತೆ ಮತ್ತು ಬ್ಯಾಂಕುಗಳಲ್ಲಿ ಸ್ಪರ್ಧಾತ್ಮಕ ಭಾವನೆ ಬೆಳೆದು ಬಂದರೆ ಮಾತ್ರ ಸಂಪನ್ಮೂಲಗಳ ಸಂಗ್ರಹ ಮತ್ತು ಅವುಗಳ ಸದ್ವಿನಿಯೋಗ ತ್ವರಿತಗತಿಯಿಂದ ಸಾಗುವದರಲ್ಲಿ ನಿಃಸಂಶಯ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖಾಸಗಿ ವಿಭಾಗದಲ್ಲಿ ೧೦,೦೦೦ ಕೋಟಿ ರೂಪಾಯಿಗಳ ವಿನಿಯೋಗದ ಗುರಿಯನ್ನಿಟ್ಟುಕೊಳ್ಳಲಾಗಿದೆ. ರಾಷ್ಟ್ರೀಕರಣದ ನಿಮಿತ್ತವಾಗಿ ಕೃಷಿ ಮತ್ತು ಸಣ್ಣ ಉದ್ದಿಮೆಗಳಿಗೆ ಹೆಚ್ಚು ಸಾಲ ದೊರೆತರೆ ದೊಡ್ಡ ಉದ್ದಿಮೆಗಳಿಗೆ ಬೇಕಾಗುವ ಸಾಲದ ಪ್ರಮಾಣ ಕಡಿಮೆಯಾಗುವದೆಂಬ ಕಲ್ಪನೆ ಇದೆ. ಠೇವುಗಳ ಮೊತ್ತ ಪ್ರತಿ ವರ್ಷ

೬೦೦–೭೦೦ ಕೋಟಿ ರೂಪಾಯಿಗಳಂತೆ ಹೆಚ್ಚುವದರಿಂದ ದೊಡ್ಡ ಉದ್ದಿಮೆಗಳಿಗೆ ಬೇಕಾಗುವ ೩೦೦–೪೦೦ ಕೋಟಿ ರೂಪಾಯಿಗಳ ಸಾಲ ಸಹಜವಾಗಿ ದೊರೆಯಬಹುದು. ಇಲ್ಲಿಯ ವರೆಗೆ ಬ್ಯಾಂಕುಗಳು ದೊಡ್ಡ ಉದ್ದಿಮೆಗಳಿಗೆ ಶೇಕಡಾ ೬೪ ರಷ್ಟನ್ನು ಸಲ್ಲಿಸುತ್ತಿದ್ದವು. ಕೃಷಿ ಮತ್ತಿತರ ಕೈಗಾರಿಕೆಗಳಿಗೆ ಅಧಿಕ ಪ್ರಮಾಣದಲ್ಲಿ ದೊರೆತರೆ ದೊಡ್ಡ ಉದ್ದಿಮೆಗಳಲ್ಲಿಯ ಬಂಡವಾಳದ ಗಾತ್ರ ಕುಂಠಿತವಾಗಬಹುದು. ಸರಕಾರವು ಬಂಡ ವಾಳದ ಗಾತ್ರವು ಅಧಿಕವಾಗುವಂತೆ ಯೋಗ್ಯವಾದ ಹಣ ವಿನಿಯೋಗ ಧೋರಣೆಯನ್ನು ರೂಪಿಸಬೇಕಾಗುವದು. ಹಣ ವಿನಿಯೋಗ ಕಾರ್ಯದಲ್ಲಿ ರಾಜಕೀಯ ವರ್ಚಸ್ಸಿಗೆ ಆಡಳಿತ ವರ್ಗವು ಮೋಸ ಹೋಗದಂತೆ ಜಾಗರೂಕತೆ ವಹಿಸಬೇಕು. ಈ ಉದ್ದಿಮೆಗಳ ವ್ಯವಹಾರ ರಾಷ್ಟ್ರೀಕರಿಸದೆ ಇದ್ದ ಬ್ಯಾಂಕು ಗಳು ಮತ್ತು ವಿದೇಶೀ ಬ್ಯಾಂಕುಗಳ ಕೂಡ ಹೆಚ್ಚಾಗುವ ಸಂಭವ ಇದೆ.

ಉಪಸಂಹಾರ

ವಾಣಿಜ್ಯ ಬ್ಯಾಂಕುಗಳ ಅಕ್ರಮ ವ್ಯವಹಾರಗಳನ್ನು ತಡೆಗಟ್ಟಲು ರಾಷ್ಟ್ರೀಕರಣವೊಂದೇ ಮಾರ್ಗವೆಂದು ಕಂಡುಬಂತು. ಈ ಬ್ಯಾಂಕುಗಳನ್ನು ರಾಷ್ಟ್ರೀಕರಿಸದೇ ಬಿಟ್ಟಿದ್ದಾದರೆ ರಾಷ್ಟ್ರದ ಆರ್ಥಿಕ ಸಾಮರ್ಥ್ಯ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿ ರಾಷ್ಟ್ರದ ಸರ್ವತೋಮುಖ ಆರ್ಥಿಕ ಅಭಿವೃದ್ಧಿ ಕಷ್ಟಸಾಧ್ಯವಾಗಬಹುದಾಗಿತ್ತು. ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣದಿಂದ ಸರಕಾರವು ಬ್ಯಾಂಕುಗಳ ಠೇವಿನ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿದಂತಾಗಿದೆ. ಒಟ್ಟು ಬ್ಯಾಂಕುಗಳ ಠೇವಿನ ಶೇಕಡಾ ೯೦ರಷ್ಟು ರಾಷ್ಟ್ರೀಕೃತ ೨೨ ಬ್ಯಾಂಕುಗಳಿಗೆ ಸೇರಿದುದರಿಂದ ಸರಕಾರವು ಈ ಸಂಪನ್ಮೂಲಗಳನ್ನು ಸದ್ವಿನಿಯೋಗ ಮಾಡುವಂತೆ ಅನುಕೂಲವಾಗುವದು. ಇಲ್ಲಿಯ ವರೆಗೆ ಬೇಸಾಯ, ಸಣ್ಣ ಕೈಗಾರಿಕೆಗಳು ಮತ್ತು ನಿರ್ಯಾತ ವ್ಯಾಪಾರಗಳಿಗೆ ದೊರೆಯಬೇಕಾದ ಹಣ ದೊರೆಯುತ್ತಿದ್ದಿಲ್ಲವಾದುದರಿಂದ ಅವುಗಳ ಉತ್ಪಾದನೆ ಕುಂಠಿತವಾಗಿತ್ತು. ಯೋಜನಾಬದ್ಧ ಕಾರ್ಯಕ್ರಮಗಳ ಗೊತ್ತುಗುರಿಗಳನ್ನು ನಿರ್ಧ

ರಿಸಿದ ಅವಧಿಯಲ್ಲಿ ಮುಟ್ಟಬೇಕಾದರೆ ಅಂಶತಃ ನಿಯಂತ್ರಣ ಹೆಚ್ಚು ಉಪಯೋಗಕಾರಿಯಾಗಲಾರದು. ಬ್ಯಾಂಕುಗಳ ಸಾಮಾಜಿಕ ನಿಯಂತ್ರಣದಿಂದ ಸರಕಾರವು ತನ್ನ ಉದ್ದೇಶಗಳನ್ನು ತೀವ್ರ ಗತಿಯಿಂದ ಪೂರ್ತಿಗೊಳಿಸಲು ಸಾಧ್ಯವಾಗದೆಂದು ಮನಗಂಡಿತು.

ಬ್ಯಾಂಕ ರಾಷ್ಟ್ರೀಕರಣ ಕೆಲ ತಜ್ಞರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದೆ. ಸಾಮಾಜಿಕ ನಿಯಂತ್ರಣದ ಅವಧಿಯಲ್ಲಿ ಬ್ಯಾಂಕುಗಳು ಸಾಕಷ್ಟು ಪ್ರಗತಿ ಸಾಧಿಸಿವೆ. ರಾಷ್ಟ್ರೀಕರಣದಿಂದ ಅನಾವಶ್ಯಕ ಸಂಶಯ ವಾತಾವರಣ ಖಾಸಗಿ ವಿಭಾಗದಲ್ಲಿ ನಿರ್ಮಾಣವಾಗಿದೆ. ಆಡಳಿತ ದೃಷ್ಟಿಯಿಂದಲೂ ಕೂಡ ರಾಷ್ಟ್ರೀಕರಣ ಸಮಂಜಸವಾಗಿಲ್ಲ. ಆದುದರಿಂದ ಸರಕಾರವು ಸಂಪೂರ್ಣವಾಗಿ ವಿಚಾರಿಸಿ ಸಾಮಾಜಿಕ ಧೋರಣೆಯನ್ನೇ ಮುಂದುವರಿಸಬಹುದಾಗಿತ್ತು ಎಂದು ಕೆಲವರು ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಭಾರತೀಯ ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಶ್ರೀ ರಾಮನಾಥ ಪೋತದಾರವರ ಅಭಿಪ್ರಾಯದಲ್ಲಿ ರಾಷ್ಟ್ರೀಕರಣವು ಮುಂದಾಲೋಚನೆ ಮಾಡದೆ ಕೈಕೊಂಡ ಕ್ರಮವಾಗಿದೆ. ರಾಷ್ಟ್ರೀಕರಣವು ಸಾಮಾಜಿಕ ನಿಯಂತ್ರಣಕ್ಕಿಂತ ಹೆಚ್ಚಾಗಿ ಏನೂ ಸಾಧಿಸುವಂತಿಲ್ಲ ಎಂದು ಹೇಳಿದ್ದಾರೆ.ಅರ್ಥತಜ್ಞ ಡಾ॥ ಸಿ.ಡಿ.ದೇಶಮುಖರವರು ಬ್ಯಾಂಕ ರಾಷ್ಟ್ರೀಕರಣಕ್ಕಿಂತ ಸಾಮಾಜಿಕ ನಿಯಂತ್ರಣವೇ ಯೋಗ್ಯ ನೀತಿಯೆಂದು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಆಗಾಗ ಆದೇಶವನ್ನೀಯಲು ಒಂದು ಉಚ್ಚ ಮಟ್ಟದ

ಸಮಿತಿಯ ಅವಶ್ಯಕತೆಯುಂಟು. ದೇಶದಲ್ಲಿಯ ಆಡಳಿತ ವ್ಯವಸ್ಥೆ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿದಾಗ ರಾಷ್ಟ್ರೀಕರಣ ಉದ್ದೇಶಗಳನ್ನು ಬದಿಗಿಟ್ಟು ಬ್ಯಾಂಕಿನ ಪತ್ತು ಬೇರೆ ಭಾಗಗಳಿಗೆ ಉಪಯೋಗವಾಗಬಹುದು ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಎಚ್. ವ್ಹಿ. ಆರ್. ಅಯ್ಯಂಗಾರರು ಕೂಡ 'ರಾಷ್ಟ್ರೀಕರಣವು ಒಂದು ತಪ್ಪು ಹೆಜ್ಜೆಯಾಗಿದ್ದು ಅದರಿಂದ ಆರ್ಥಿಕ ಸ್ಥಿತಿಯಲ್ಲಿ ಯಾವ ಬದಲಾವಣೆ ಆಗುವಂತಿಲ್ಲ' ಎಂದು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಎಸ್. ಎಲ್. ಕಿರ್ಲೋಸ್ಕರ ಮೊದಲಾದ ಉದ್ಯೋಗಪತಿಗಳ ಅಭಿಪ್ರಾಯದ ಮೇರೆಗೆ ರಾಷ್ಟ್ರೀಕರಣವೊಂದು ರಾಜಕೀಯವಾಗಿದೆಯೇ ಹೊರತು ಆರ್ಥಿಕ ದೃಷ್ಟಿಯಿಂದ ರಾಷ್ಟ್ರದ ಆರ್ಥಿಕ ವಾತಾವರಣವನ್ನು ಬದಲಿಸದು ಎಂದು ತಮ್ಮ ಅಭಿಪ್ರಾಯ ಕೊಟ್ಟಿರುವರು. ಈ ಪ್ರಕಾರ ಬ್ಯಾಂಕುಗಳ ರಾಷ್ಟ್ರೀಕರಣವು ಇಂದು ನಮ್ಮ ಮುಂದೆ ಕಾಯ್ದೆಯ ರೂಪದಲ್ಲಿದ್ದರೂ ಅದೊಂದು ವಾದಗ್ರಸ್ತ ಸಮಸ್ಯೆಯಾಗಿ ಉಳಿದಿದೆ.

ಪ್ರಜಾಪ್ರಭುತ್ವ ಆಡಳಿತದಲ್ಲಿ ಭಿನ್ನಾಭಿಪ್ರಾಯಗಳಿಗೆ ಪ್ರಾಧಾನ್ಯತೆಯನ್ನೀಯಲೇಬೇಕು. ಸರಕಾರವು ಅನುಭವಿಕ ಉದ್ದಿಮೆದಾರರ, ಆಡಳಿತಗಾರರ ಸಲಹೆ ಸೂಚನೆಗಳ ಮೇರೆಗೆ ವಿನಿಯೋಗ ಮತ್ತು ಪತ್ತಿನ ಧೋರಣೆಯನ್ನು ರೂಪಿಸಿದರೆ ಮಾತ್ರ ದೀರ್ಘಕಾಲೀನ ಯೋಜನಾಗುರಿಗಳನ್ನು ಪೂರ್ತಿಗೊಳಿಸಲು ಸಾಧ್ಯವಾಗುವದು. ರಾಷ್ಟ್ರೀಕೃತ ಬ್ಯಾಂಕುಗಳು ಇಂದು ಜನತೆಯ ಬ್ಯಾಂಕುಗಳಾಗಿವೆ. ಅವು ಜನತೆಯ ಕಲ್ಯಾಣ

ಕ್ಕಾಗಿ ಕಾರ್ಯ ನಿರ್ವಹಿಸುವಂತೆ ಜನರು ಸಹಕಾರ ವಿಶ್ವಾಸಗಳಿಂದ ಅವುಗಳನ್ನು ಕಾಣಬೇಕು. ಸರಕಾರವು ಕೂಡ ದಕ್ಷ, ಪ್ರಾಮಾಣಿಕ ಮತ್ತು ತರಬೇತಿ ಹೊಂದಿದ ಆಡಳಿತಗಾರರನ್ನು ನಿಯಮಿಸಬೇಕು. ರಾಜಕೀಯ ವರ್ಚಸ್ಸು ಬ್ಯಾಂಕುಗಳ ಕಾರ್ಯ ನಿರ್ವಹಣೆಯ ಮೇಲೆ ಬೀಳದಂತೆ ಜಾಗರೂಕತೆ ವಹಿಸಬೇಕು. ದೇಶವು ಎದುರಿಸುತ್ತಿರುವ ಆಹಾರ ಸಮಸ್ಯೆ, ಕಚ್ಚಾ ಮಾಲಿನ ಕೊರತೆ, ನಿರುದ್ಯೋಗ, ನಿರ್ಯಾತದಲ್ಲಿ ಕಡಿತ ಮೊದಲಾದ ಸಮಸ್ಯೆಗಳ ನಿವಾರಣೆಗೆ ಬ್ಯಾಂಕುಗಳ ರಾಷ್ಟ್ರೀಕರಣವು ಯಾವ ರೀತಿಯಲ್ಲಿ ತಾರಕವಾಗಿ ಪರಿಣಮಿಸುವದೆಂಬುದನ್ನು ನಾವು ಕಾದುನೋಡಬೇಕು.

೨. ಸಾರ್ವಜನಿಕ ಅಭಿಪ್ರಾಯ (ದ್ವಿ.ಆ) – ಎನ್. ರಾಜಗೋಪಾಲರಾವ್

೩. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
–ದೇವೇಂದ್ರಕುಮಾರ ಹಕಾರಿ

೪. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ (ದ್ವಿ. ಆ.)
–ಜಿ. ಡಿ. ನಾಡಕರ್ಣಿ

೫. ಪ್ರಶ್ನೆಗಳು (ದ್ವಿ. ಆ.) –ಕೆ. ಡಿ. ತಂಗೋಡ

೬. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ
ತತ್ವನಿಷ್ಠೆ (ದ್ವಿ. ಆ.) - ಬಿ. ವ್ಹಿ. ಮಲ್ಲಾಪುರ

೭. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ (ದ್ವಿ. ಆ.)
–ಎಸ್. ಜಿ. ಕರಭಂಟನಾಳ

೮. ಕನ್ನಡ ಜೈನ ಪುರಾಣಗಳು (ದ್ವಿ.ಆ.) – ಎಸ್. ಎನ್. ನಾಯಕ

೯. ಕನ್ನಡ ನಾಟ್ಯಸೃಷ್ಟಿ (ದ್ವಿ.ಆ.) –ಎಚ್. ಜಿ. ಲೋಕೂರ

೦. ಹರಿಹರನು ಚಿತ್ರಿಸಿದ ಶಿವಶರಣೆಯರು (ದ್ವಿ.ಆ.) – ಬಿ. ಬಿ. ಹೆಂಡಿ

೧. ನೀವು ಬಯಸುವ ಮಗು ಗಂಡೊ?
ಹೆಣ್ಣೊ? (ದ್ವಿ. ಆ.) - ಕೆ. ಆರ್. ರಾಮಸ್ವಾಮಿ

೨. ಆಂಡಯ್ಯ –ಬಿ. ಎಸ್. ಕುಲಕರ್ಣಿ

೩. ಬೆಳವಲನಾಡಿನ ಬೆಳೆಗಳು –ಎಸ್. ಎ. ಹೊಸಮನಿ

೪. ಜಾನಪದ ಕಥೆಗಳು (ದ್ವಿ.ಆ.) –ಎಲ್. ಆರ್. ಹೆಗಡೆ

೫. ಸುಧಾರಿಸಿದ ಬೇಸಾಯ (ದ್ವಿ.ಆ.) –ಎ. ಸಿ. ಕಲ್ಯಾಣಿಮಠ

೬. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು (ದ್ವಿ. ಆ.)
–ಬಿ. ಆರ್. ಗೋಪಾಲ

೭. ಗ್ರಂಥಾಲಯದ ಅಂತರಂಗ ದ್ವಿ.ಆ. – ಎಸ್. ಆರ್. ಗುಂಜಾಳ

೮. ಸ್ತ್ರೀ ಮತ್ತು ಶಿಕ್ಷಣ (ದ್ವಿ.ಆ.) –ವನಮಾಲಾ ಆಚಾರ್

೯. ಜಾಗತಿಕ ಸರಕಾರ –ಸಿ. ವೀರಬಸಣ್ಣ

೦. ಸಮುದಾಯ ಸಂಘಟನೆ – ಎಚ್. ಎಂ. ಮರುಳಸಿದ್ಧಯ್ಯ

೧. ಅಶೋಕನ ಧರ್ಮಶಾಸನಗಳು –ಶ್ರೀನಿವಾಸ ರಿತ್ತಿ

೨. ಪ್ರಾಚೀನ ಭಾರತದ ರಾಜ್ಯಪದ್ಧತಿ (ದ್ವಿ. ಆ.)
–ಸಿ. ವ್ಹಿ. ರಂಗಸ್ವಾಮಿ

೩. ಅಕ್ಕಮಹಾದೇವಿ ಮತ್ತು ಮೀರಾಬಾಯಿ
–ಎಸ್. ಎಸ್. ಕಬ್ಬಿನ

೪. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ
–ಬಿ. ಬಿ. ಮಹೀಶವಾಡಿ

೫. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
–ಬಿ. ಸಿ. ಜವಳಿ

೬. ಭಾರತ ರಾಜ್ಯಘಟನೆ (ದ್ವಿ. ಆ.) –ಎಂ. ಎಸ್. ಪಾಟೀಲ

೭. ಪಂಚಾಯತಿ ರಾಜ್ಯ –ಎಸ್. ಜಿ. ಕರಭಂಟನಾಳ
ಮತ್ತು ಕೆ. ಡಿ. ಬಸವ

೮. ವಿಷಮಜ್ವರ (ದ್ವಿ. ಆ.) –ಪಿ. ಎಸ್. ಶಂಕರ

೫೯. ಪುಸ್ತಕ ಭಾಂಡಾರ ಕಾಯದೆ —ಜಿ. ಎಂ. ಪಾಟೀಲ
೬೦. ಸರ್ ಐಸಾಕ್ ನ್ಯೂಟನ್ —ಆರ್. ವ್ಹಿ. ಅಬ್ಬಿಗೇರಿ
೬೧. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ. ಕೆ. ಮೇಟಿ
೬೨. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ —ಎಸ್. ಕೆ. ಕಡೆತೋಟದ
೬೩. ರಾಸಾಯನಿಕ ಕಿಣ್ವಗಳು —ಎಂ. ಎಸ್. ಎಸ್. ರಾವ್
೬೪. ಪ್ರಜಾಪ್ರಭುತ್ವದ ಮೂಲತತ್ವಗಳು —ಕೆ. ಬಿ. ಬಕ್ಕಪ್ಪ
೬೫. ಹೃದಯಾಘಾತ — ಪಿ. ಎಸ್. ಶಂಕರ
೬೬. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ —ಡಿ. ಎ. ಚಿಕ್ಕಿ
೬೭. ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು —ಎಂ. ಜಿ. ಬಿರಾದಾರ
೬೮. ಯೋಜನೆಗಳೇಕೆ ಬೇಕು? —ಎಸ್. ಎಸ್. ಯಮ್ಮಿ
೬೯. ಸಗರನಾಡಿನ ಶಿವಶರಣರು —ವ್ಹಿ. ಶಿವಾನಂದ
೭೦. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ —ಆರ್. ಎಸ್. ಭೂಸನೂರಮಠ
೭೧. ವಿಜಯನಗರದ ನಿರ್ಣಾಯಕ ಯುದ್ಧ —ಎಸ್. ಬಿ. ಕೋಡದ
೭೨. ಬಸವಣ್ಣನವರನ್ನು ಕುರಿತ ಶಾಸನಗಳು—ಎಂ. ಎಂ. ಕಲಬುರ್ಗಿ
೭೩. ಆಧುನಿಕ ಭಾಷಾ ವಿಜ್ಞಾನ —ಜಿ. ಎಸ್. ಕುಳ್ಳಿ
೭೪. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
೭೫. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ —ವ್ಹಿ. ಎಸ್. ಕುಲಕರ್ಣಿ
೭೬. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು —ಎ. ಸ. ಕಲ್ಯಾಣಿಮಠ
೭೭. ಕನ್ನಡ ನುಡಿಯ ಬೆಳವಣಿಗೆ —ಎಚ್. ಜಿ. ಲೋಕೂರ
೭೮. ಹರಿಹರನ ಗಿರಿಜಾಕಲ್ಯಾಣ —ಬಿ. ವ್ಹಿ. ಶಿರೂರ
೭೯. ಹೊಟ್ಟೆಯ ಹುಣ್ಣು —ಪಿ. ಎಸ್. ಶಂಕರ
೮೦. ಸಂಯೋಜಕ ಶಕ್ತಿ —ಬಿ. ಜಿ. ಜ್ಯೋತಿ
೮೧. ಸಂಸದೀಯ ಸರಕಾರ ಭಾರತಕ್ಕೆ ಒಪ್ಪುವದೇ? —ವಸಂತ ಪಾಟೀಲ
೮೨. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? —ಎಂ. ಸಿ. ಕೊಡ್ಲಿ
೮೩. ನಗೆಗಾರ ನಯಸೇನ —ಎಂ. ಎಸ್. ಸುಂಕಾಪುರ
೮೪. ಶೂನ್ಯ ಸಂಪಾದನೆ —ವ್ಹಿ. ಎಸ್. ಕಂಬಿ
೮೫. ಮಹಮೂದ ಗವಾನ —ಎಲ್. ಆರ್. ಕುಲಕರ್ಣಿ
೮೬. ಕೆಳದಿಯ ನಾಯಕರು —ಜಿ. ಎಸ್. ದೀಕ್ಷಿತ
೮೭. ಮುಳುಗುಂದ ನಾಡು —ಎಸ್. ಎಚ್. ರಿತ್ತಿ
೮೮. ಶ್ವಾಸಕೋಶಕ್ಷಯ —ಪಿ. ಎಸ್. ಶಂಕರ
೮೯. ಕರ್ನಾಟಕದಲ್ಲಿ ಗ್ರಂಥಾಲಯಗಳು— ಎಸ್. ಆರ್. ಗುಂಜಾಳ
೯೦. ಮಿರ್ಜಾ ಘಾಲಿಬ್ —ಅಬ್ದುಲ್ ಮಜೀದ್‌ಖಾನ್
೯೧. ಕಬೀರದಾಸ —ಬಸವಯ್ಯಾ ಶಿಗೋಳ

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ